[MADAM SPEAKER in the Chair]

Notice of Adjournment Motion *re* : alleged Police Excesses in Srirangapatna

ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ನನ್ಮಾನ್ಯ ಅಧ್ಯಕ್ಷಣಿಯವರೇ, ನಾನು ಒಂದು ನಿಲುವಳಿ ಸೂಚನೆಯನ್ನು 50ನೇ ರೂಲ್ ಪ್ರಕಾರ ತಮಗೆ ಕಳುಹಿಸಿಕೊಟ್ಟಿದ್ದೇನೆ. ಅದಕ್ಕೆ ತಮ್ಮ ಒಪ್ಪಿಗೆಯನ್ನು ಕೊಡಬೇಕು. ಅದನ್ನು ಈ ಸಭೆಯಲ್ಲಿ ಮಂಡಿಸುವುದಕ್ಕೆ ತಮ್ಮ ಅಪ್ಪಣೆಯನ್ನು ಬೇಡುತ್ತಿದ್ದೇನೆ. ಅದರ ಬಗ್ಗೆ ಸೂಕ್ಷ್ಮವಾಗಿ ಹೇಳುವುದಾದರೆ, ಶ್ರೀರಂಗಪಟ್ಟಣದ ಪುರಸಭಾಧ್ಯಕ್ಷರನ್ನು ಮತ್ತೆ ಮಾನ್ಯ ಶ್ರೀ ಸತ್ಯನಾರಾಯಣ ಎಂಬ ಒಬ್ಬ ಕಾನ್ಸಿಲರನ್ನು ಈ ತಿಂಗಳು 6ನೇ ತಾರೀಖಿನಲ್ಲಿ ಅರೆಸ್ಟ್ ಮಾಡಿ ಸುಮಾರು 30 ಗಂಟೆಗಳ ಕಾಲ ಲಾಕಪ್ಪಿನಲ್ಲಿಟ್ಟು ಅವರನ್ನು ಹೊಡೆದು ಸಾಕಷ್ಟು ಅವಮಾನಗೊಳಿಸಿ ಹ್ಯಾಂಡ್‌ಕಫ್ ಹಾಕಿಕೊಂಡು ಊರಿನೊಳಗೆ ಮೆರವಣಿಗೆ ಮಾಡಿ ಇವತ್ತಿನ ದಿವಸ ಹೆಚ್ಚು ಅವಹೇಳನ ಮಾಡಿದ್ದಾರೆ. ಬಹುಶಃ ಇದರ ಬಗ್ಗೆ ಯಾವ ನಾಗರಿಕ ಸರ್ಕಾರವೂ ಕೂಡ ಇದನ್ನು ಒಪ್ಪತಕ್ಕದ್ದು ಅಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಈ ವಿಷಯದಲ್ಲಿ ತಮ್ಮ ಒಂದು ಸಮ್ಮತಿಯನ್ನು ಸೂಚಿಸುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಕಳೆದ ಎರಡು ಮೂರು ತಿಂಗಳಿಂದೀಚೆಗೆ ಮುಖ್ಯಮಂತ್ರಿಗಳಾಗಿ ಈ ಸಭೆಯ ನಾಯಕರು ಹಲವಾರುಸಾರಿ ಒಂದು ಮಾತನ್ನು ಹೇಳುತ್ತಲೇ ಇದ್ದಾರೆ. ನಾನು ಕಾನೂನನ್ನು ರಕ್ಷಣೆ ಮಾಡುವುದರಲ್ಲಿ ಯಾವುದನ್ನೂ ಪಕ್ಷಾತೀತವಾಗಿ ನೋಡುತ್ತೇನೆ. ನಾನು ನಿಷ್ಪಕ್ಷಪಾತಿಯಾಗಿ ಈ ಒಂದು ಸ್ಥಾನದಲ್ಲಿ ಕೂತು ಎಲ್ಲ ವಿಚಾರಗಳನ್ನೂ ತೀರ್ಮಾನ ಮಾಡುತ್ತೇನೆಂದು ಹೇಳಿದ್ದಾರೆ. ಇವತ್ತು ರಾಜಕೀಯ ದ್ವೇಷಕ್ಕೋಸ್ಕರವಾಗಿ ಒಬ್ಬ ಪುರಸಭಾಧ್ಯಕ್ಷರನ್ನೂ ಮತ್ತು ಒಬ್ಬ ಕಾರ್ಪೋರೇಷನ್ ಸದಸ್ಯರನ್ನು ಅರೆಸ್ಟ್ ಮಾಡಿ 30 ಗಂಟೆಗಳ ಕಾಲ ಲಾಕಪ್ಪಿನಲ್ಲಿಡುವುದು ಖಂಡಿತ ಸರಿಯಾದುದಲ್ಲ. ಬಹುಶಃ 24 ಗಂಟೆಗಳ ಮೇಲೆ ಯಾರನ್ನಾದರೂ ಲಾಕಪ್ಪಿನಲ್ಲಿ ಇಡಬೇಕಾದರೆ, ಪೋಲೀಸ್ ಮ್ಯಾನ್ಯುಯಲ್ ಪ್ರಕಾರ ಅತ ಕೋರ್ಟಿನಿಂದ ಅನುಮತಿ ಪಡೆಯಬೇಕಾಗಿರುತ್ತದೆ. ಅಂದಮೇಲೆ ಪೋಲೀಸಿನವರ ದೌರ್ಜನ್ಯ ಸರಿಯಾದುದಲ್ಲ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುವುದಾದರೆ, ಬಹುಶಃ ಪುರಸಭಾಧ್ಯಕ್ಷರಾಗಿರುವವರು ಮತ್ತು ಒಬ್ಬ ಕಾನ್ಸಿಲರೂ ಹೆಚ್ಚಿನ ಜವಾಬ್ದಾರಿ ಮನುಷ್ಯರಾಗಿರುವವರು. ಅಂತಹವರನ್ನು 30 ಗಂಟೆಗಳ ಕಾಲ ಲಾಕಪ್ಪಿನಲ್ಲಿಟ್ಟು ಹ್ಯಾಂಡ್‌ಕಫ್ ಹಾಕಿ ಮೆರವಣಿಗೆ ಮಾಡಿದ ಬಗ್ಗೆ ನನ್ನಲ್ಲಿ ಸಾಕಷ್ಟು ವಿವರಣೆಗಳಿವೆ. ಆದ್ದರಿಂದ ಬಹುಶಃ ಇದನ್ನು ರಾಜಕೀಯ ದ್ವೇಷಕ್ಕೋಸ್ಕರವಾಗಿ ಮಾಡಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಇದು ನಿರ್ವಿವಾದವಾದ ಮಾತು. ಇದರ ಬಗ್ಗೆ ಪ್ರತ್ಯೇಕವಾಗಿ ಚರ್ಚೆಯಾಗಬೇಕಾಗುತ್ತದೆ. ಏಕೆಂದರೆ ಇವತ್ತು ಈ ರಾಜ್ಯದಲ್ಲಿ ಗೌರವಯುತವಾಗಿ ಬಾಳುವುದೇ ಬಹಳ ಕಷ್ಟವೆಂದು ಕಾಣುತ್ತದೆ. ಆದ್ದರಿಂದ ಈಗ ಈ ವಿಚಾರದ ಬಗ್ಗೆ ನಾನು ಸರ್ಕಾರಕ್ಕೆ ಸರಿಯಾದಂಥ ವಿವರಣೆಯನ್ನು ಕೊಡದೇಹೋದರೆ ಬಹಳ ಕಷ್ಟವಾಗುತ್ತದೆ. ಸರ್ಕಾರ ಈ ಒಂದು ಸನ್ನಿವೇಶವನ್ನು ಚೆನ್ನಾಗಿ ತಿಳಿದು ನನಗೆ ಉತ್ತರ ಹೇಳಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ನಿಜವಾಗಿ ನಾನು ಹೇಳುವುದಾದರೆ, ಪೋಲೀಸ್ ಅಧಿಕಾರಿಗಳು ಬಹಳ ಅಸೌಜನ್ಯತೆಯಿಂದ ಈ ವಿಚಾರದಲ್ಲಿ ನಡೆದುಕೊಂಡಿದ್ದಾರೆಂದು ಹೇಳಿದರೆ ಖಂಡಿತವಾಗಿ ತಪ್ಪಾಗುವುದಿಲ್ಲ. ನಾನು ಈ ವಿಚಾರದಲ್ಲಿ ಈ ಸಭೆಯಲ್ಲಿ ಚರ್ಚೆಯಾಗುವ ಕಾಲದಲ್ಲಿ ವಿವರವಾಗಿ ಎಲ್ಲ ಅಂಶಗಳನ್ನೂ ಹೇಳುತ್ತೇನೆ. ಇನ್ನೊಂದು ವಿಷಯ. ಇದರ ಬಗ್ಗೆ ಯಾರದೂ ಪಕ್ಷಾತೀತ ದೃಷ್ಟಿ ಬೇಡ. ನಿಜವಾಗಿ ಹೇಳುವುದಾದರೆ, ಅಲ್ಲಿನ ಪೋಲೀಸ್ ಅಧಿಕಾರಿಗಳು ತಮ್ಮ ಅಧಿಕಾರಕ್ಕೆ ಮೀರಿ ಎಕ್ಸೆಸ್ಸಾಗಿ ನಡೆದುಕೊಂಡಿದ್ದಾರೆ. ಅವರ ಬಗ್ಗೆ ನಿಜವಾಗಿ ಸೂಕ್ತ ಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ. ಈ ರೀತಿ ಹೆಚ್ಚು ಜವಾಬ್ದಾರಿಯುಳ್ಳ ಇಬ್ಬರು ವ್ಯಕ್ತಿಗಳನ್ನು ಅರೆಸ್ಟ್ ಮಾಡಿ ಹ್ಯಾಂಡ್‌ಕಫ್ ಹಾಕಿ ಅವಮಾನ ಮಾಡಿರತಕ್ಕ ಘಟನೆ ಏನಿದೆ ಇದರಿಂದ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ. ರಾಜ್ಯದಲ್ಲಿ ಮತ್ತೆ ಯಾವುದೇ ಪಕ್ಷ ಉಳಿಯಬೇಕೆನ್ನುವಾಗ ಅದನ್ನು ನಿರ್ನಾಮ ಮಾಡುವ ದೃಷ್ಟಿಯಿಂದ ಪೋಲೀಸ್ ಅಧಿಕಾರಿಗಳಾದವರು ವರ್ತನೆ ಮಾಡುವುದಾದರೆ ಅದರ ಬಗ್ಗೆ ಸಾಕಷ್ಟು ಪ್ರತಿಭಟನೆಯನ್ನು ನಾವು ಸೂಚಿಸಬೇಕಾಗುತ್ತದೆ. ಇವತ್ತು ಈ ಎರಡು ವ್ಯಕ್ತಿಗಳ ಮೇಲೆ ಪತ್ರಿಕೆಗಳಲ್ಲಿ ಬಂದ ವರದಿಯನ್ನು ನೋಡುವುದಾದರೆ, ಮತ್ತು ಸಂಬಂಧಪಟ್ಟ ವ್ಯಕ್ತಿಗಳು ಕೊಟ್ಟಿರುವ ದೂರುಗಳೇನಿವೆಯೋ ಅದನ್ನು ನೋಡಿದರೆ, ನಿಜವಾಗಿ ಈ ಕಾರ್ಯ ರಾಜಕೀಯ ದ್ವೇಷಿಗಳಿಂದಲೇ ನಡೆದಿದೆ ಎಂಬುದು ಗೊತ್ತಾಗುತ್ತದೆ. ಆದ್ದರಿಂದ ತಾವು ಈ ಸಭೆಯಲ್ಲಿ ಈ ನಿಲುವಳಿ ಸೂಚನೆಯನ್ನು ಚರ್ಚೆಮಾಡುವುದಕ್ಕೆ ಅನುಮತಿಯನ್ನು ಕೊಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಅಧ್ಯಕ್ಷಣಿಯವರೇ, ನಾನೂ ಕೂಡ ಇವೇ ವಿಷಯದಲ್ಲಿ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ಆದರೆ ವಿರೋಧಪಕ್ಷದ ನಾಯಕರಾದ ಮಾನ್ಯ ಶ್ರೀ ದೇವೇಗೌಡ ಅವರು ಏನು ಇದರ ಬಗ್ಗೆ ಈಗಾಗಲೇ ತಿಳಿಸಿದ್ದಾರೋ ಅದನ್ನು ಪುನರುಚ್ಚಾರ ಮಾಡುವುದಕ್ಕೆ ನಾನು ಇಷ್ಟಪಡುವುದಿಲ್ಲ. ನಾನು ಈ ಸಂದರ್ಭದಲ್ಲಿ ಒಂದು ವಿಷಯವನ್ನು ಮಾತ್ರ ಅದಕ್ಕೆ ಸೇರಿಸುವುದಕ್ಕೆ ಇಷ್ಟಪಡುತ್ತೇನೆ. ನಾನು ಹಿಂದೆ ಹಲವಾರು ಸಾರಿ ಪೋಲೀಸಿನವರ ದೌರ್ಜನ್ಯದ ಬಗ್ಗೆ ಈ ಸಭೆಯಲ್ಲಿ ಹೇಳಿದ್ದೇನೆ. ನಮ್ಮ ಮುಂದೆ ಇರುವ ವಿಷಯ ಏನೆಂದರೆ, ಶ್ರೀರಂಗಪಟ್ಟಣದ ಪುರಸಭಾಧ್ಯಕ್ಷರಿಗೆ ಬೇಡಿ ಹಾಕಿ ಊರಿನೊಳಗೆ ಮೆರವಣಿಗೆ ಮಾಡಿಸಿ, ಪೋಲೀಸ್ ಸೂಪರಿಂಟೆಂಡೆಂಟ್ ಅವರೇ ಹೋಗಿ ಅವರನ್ನು ಒದ್ದು ಹೊಡೆದು ಅವರ ಮರ್ಯಾದೆಯನ್ನು ಕಳೆದಿದ್ದಾರೆಂಬುದು. ಇದು ನಮಗೆ ಬಹಳ ಕಳವಳವನ್ನುಂಟುಮಾಡಿದೆ. ಅದಕ್ಕಾಗಿ ತಾವು ಈ ವಿಚಾರವಾಗಿ ಇಲ್ಲಿ ಚರ್ಚೆಮಾಡಲು ಅನುಮತಿ ಕೊಡುವವರಾಗಿದ್ದೀರಿ. ತಾವು ಖಂಡಿತವಾಗಿ ನಮ್ಮ ನಿಲುವಳಿ ಸೂಚನೆಗೆ ಒಪ್ಪಿಗೆ ಕೊಡಬೇಕು. ಪೋಲೀಸರ ದೌರ್ಜನ್ಯ ಹಲವಾರುಸಾರಿ ಇಲ್ಲಿ ಚರ್ಚೆಯಾದಾಗ ಸರ್ಕಾರದವರು ಅವರ ಬಗ್ಗೆ ಈ ಸಭೆಯಲ್ಲಿ ಉತ್ತರ ಕೊಡುವ ನಮೂನೆ ನಮಗೆ ಬಹಳ ಚೆನ್ನಾಗಿ ಗೊತ್ತಿದೆ. ಆದ್ದರಿಂದ ತಾವು ಈ ವಿಷಯದಲ್ಲಿ ಇಲ್ಲಿ ಚರ್ಚೆಮಾಡಲು ಒಪ್ಪಿಗೆ ಕೊಡಬೇಕು. ಈ ವಿಚಾರದಲ್ಲಿ ಇಲ್ಲಿ ಚರ್ಚೆಯಾಗಿ ಅದರ ಬಗ್ಗೆ ತಖೆಯಾದರೆ ಆಗ ಈ ಒಂದು ವಿಷಯದ ಮೇಲೆ ಹೆಚ್ಚು ಬೆಳಕು ಚೆಲ್ಲಿದಂತಾಗಿ ಆಗುತ್ತದೆ. ಅದರಿಂದ ಸರ್ಕಾರದ ನೀತಿ, ನಡೆವಳಿಕೆ, ಪೋಲೀಸರ ವರ್ತನೆ ಎಷ್ಟರಮಟ್ಟಿಗೆ ಇರಬೇಕು ಎಂಬುದು ಸ್ಪಷ್ಟವಾಗಿ ತಿಳಿಯಬಹುದು. ಬೇಡಿಗಳನ್ನು ಯಾರಿಗೆ ಪ್ರಯೋಗ ಮಾಡಬೇಕೆಂಬುದು ಪೋಲೀಸ್ ಮ್ಯಾನ್ಯುಯರ್‌ನಲ್ಲಿ ಚೆನ್ನಾಗಿ ಹೇಳಿದ್ದಾರೆ ಆ ವಿಷಯದಲ್ಲಿ ಈಗ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಈ ವಿಷಯ ಇಲ್ಲಿ ಚರ್ಚೆ ಬಂದಾಗ ವಿವರವಾಗಿ ಹೇಳುತ್ತೇನೆ. ಹಿಂದೆ ಹೊಸನಗರ ತಾಲ್ಲೂಕಿನಲ್ಲಿ ಇಂತಹ ಒಂದು ಪೋಲೀಸರ ದೌರ್ಜನ್ಯ ನಡೆದಾಗ ಅದರ ಬಗ್ಗೆ ನಾನು ಅನೇಕ ವಿಚಾರಗಳನ್ನು ಹೇಳಿದ್ದರೂ ಪೋಲೀಸರ ನಡೆವಳಿಕೆ ಇನ್ನೂ ಉತ್ತಮವಾಗಲಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಆದ್ದರಿಂದ ಈ ವಿಷಯ ಇಲ್ಲಿ ಚರ್ಚೆಯಾದರೆ ಅದರ ಬಗ್ಗೆ ಹೆಚ್ಚು ಬೆಳಕು ಉಂಟಾಗಿ ನ್ಯಾಯಾನ್ಯಾಯ ವಿಮರ್ಶೆಯಾಗಲು ಸಹಾಯವಾಗುತ್ತದೆ.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ). ಅಧ್ಯಕ್ಷರೇ, ಈ ಪ್ರಕರಣ ಈ ಸಭೆಯಲ್ಲಿ ಚರ್ಚೆಮಾಡುವುದಕ್ಕೆ ತಾವು ಅನುಮತಿ ಕೊಡುವುದಕ್ಕೆ ಮುಂಚಿತವಾಗಿ ನಾನು ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಪ್ರಕರಣಕ್ಕೆ ಸಂಬಂಧಪಟ್ಟವರು ಮೊದಲು ನನ್ನ ಹತ್ತಿರ ಬಂದರು. ಅದು ಒಂದು ಕರುಣಾಜನಕವಾದ ಕಥೆ. ಅದನ್ನು ಇಲ್ಲಿ ಹೇಳದೇ ಇದ್ದರೆ, ಲೋಪವಾಗುತ್ತದೆ. ಮಾನ್ಯ ಶ್ರೀ ದೇವೇಗೌಡರು ಮತ್ತು ಶ್ರೀ ಬಂಗಾರಪ್ಪನವರು ಏನೊಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದಾರೋ ಅವರು ಅದನ್ನು ಕಳುಹಿಸುವುದಕ್ಕೆ ಮುಂಚಿತವಾಗಿಯೇ ಕಾಲಕ್ಕೆ ಸರಿಯಾಗಿ ನಾನೂ ಸಹ ಕಳುಹಿಸಬೇಕೆಂದು ಇದ್ದರೂ ಸ್ವಲ್ಪಮಟ್ಟಿಗೆ ವಿಳಂಬ ಮಾಡಿದ್ದೇನೆ. ಏಕೆಂದರೆ ಈ ವಿಚಾರ ಬಹಳ ಗುರುತರವಾದುದು, ಜವಾಬ್ದಾರಿಯುತವಾದುದು, ಬಹಳ ಗಂಭೀರವಾಗಿ ಯೋಚನೆ ಮಾಡತಕ್ಕದ್ದು. ಈ ಒಂದು ನಿಲುವಳಿ ಸೂಚನೆಗೆ ಅವರಿಬ್ಬರೇ ಸೀಮಿತವೆಂದು ಅಧ್ಯಕ್ಷರಾದ ತಾವು ತಿಳಿದು ಈ ವಿಚಾರವನ್ನು ಬೈಫರ್‌ಕೇಟ್ ಮಾಡುವ ಉದ್ದೇಶಕ್ಕೆ ಹೋಗಬೇಡಿ. ನನ್ನ ಸ್ನೇಹಿತರಾಗಿರುವ ಅವರಿಬ್ಬರಿಗೂ ಬೆಂಬಲ ಕೊಟ್ಟು ನಾನು ಮಾತನಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ. ನಾನು ತಮ್ಮಲ್ಲಿ ಅರಿಕೆ ಮಾಡುವುದಿಷ್ಟೆ .....

ಅಧ್ಯಕ್ಷರು.—ಈ ಸೂಚನೆಯ ಸ್ಕೋಪ್ ಎಷ್ಟಿದೆ ಎಂಬುದು ನನಗೆ ಗೊತ್ತಿದೆ.

ಶ್ರೀ ವಾಟಾಳ್ ನಾಗರಾಜ್.—ನಾನು ಈ ಹಿಂದೆ ಮಾತನಾಡಿರತಕ್ಕ ಮಾನ್ಯ ಸದಸ್ಯರು ಹೇಳಿದ್ದನ್ನು ಸಮರ್ಥನೆ ಮಾಡುವುದಲ್ಲದೆ ಅವರು ಹೇಳದೆ ಇರತಕ್ಕ ಅನೇಕ ವಿಚಾರಗಳನ್ನು, ಆ ಕರುಣಾಜನಕ ಕಥೆಯನ್ನು ತಮ್ಮ ಮೂಲಕ ಈ ಸಭೆಯ ಗಮನಕ್ಕೆ ತರಬೇಕೆಂದಿದ್ದೇನೆ, ನನಗೆ ತಾವು ದಯವಿಟ್ಟು ಎರಡು ನಿಮಿಷ ಅವಕಾಶವನ್ನು ಕೊಡಬೇಕಾಗಿ ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು.—ತಾವು ದಯವಿಟ್ಟು ಈಗ ಕುಳಿತುಕೊಳ್ಳಬೇಕು...

ಶ್ರೀ ವಾಟಾಳ್ ನಾಗರಾಜ್. —ಶ್ರೀರಂಗಪಟ್ಟಣದ ಮುನಿಸಿಪಾಲಿಟಿಯ ಅಧ್ಯಕ್ಷರಾದ ಶ್ರೀ ಅಣ್ಣೇಗೌಡರ ಬಗ್ಗೆ ಪೋಲೀಸರು ನಡೆಸಿರತಕ್ಕ ದೌರ್ಜನ್ಯದ ವಿಚಾರದಲ್ಲಿ ಇಲ್ಲಿ ಚರ್ಚೆ ನಡೆಯಬೇಕೇ ಬೇಡವೇ ಎಂಬುದನ್ನು ತೀರ್ಮಾನ ಮಾಡತಕ್ಕ ಅಧಿಕಾರ ಈ ಸಭೆಯ ಅಧ್ಯಕ್ಷರಿಗೆ ಸೇರಿದ್ದು, ಅದರ ಬಗ್ಗೆ ನಾನು ಚರ್ಚೆ ಮಾಡುತ್ತಿಲ್ಲ. ಅಲ್ಲಿ ಏನು ನಡೆದಿದೆ ಎಂಬುದನ್ನು ನಾನು...

ಅಧ್ಯಕ್ಷರು.—ಆ ವಿಚಾರದಲ್ಲಿ ಈಗಾಗಲೇ ಇಬ್ಬರು ಮಾನ್ಯ ಸದಸ್ಯರು ಮಾತನಾಡಿದ್ದಾರೆ, ಸಾಕು.

ಶ್ರೀ ವಾಟಾಳ್ ನಾಗಾರಾಜ್.—ಅವರಿಬ್ಬರಿಗಿಂತಲೂ ನನಗೆ ಹೆಚ್ಚಿನ ವಿಚಾರಗಳು ಗೊತ್ತಿದೆ. ನಾನು ಅಲ್ಲಿ ನಡೆದುದನ್ನು ಕಣ್ಣಾರೆ ಕಂಡಿದ್ದೇನೆ. ಈ ದಿವಸ ಪೋಲೀಸರು ಅವರನ್ನು ಬೆನ್ನುಹತ್ತಿ ಬಂದಿದ್ದಾರೆ. ಅವರು ಒಂದು ರೂಮಿನಲ್ಲಿ ಯಾರ ಕಣ್ಣಿಗೂ ಬೀಳದಂತೆ ಇರುತ್ತಾರೆ. ನಾನು ಹೇಳುವುದಿಷ್ಟೆ. ಆ ಕರುಣೆಯ ಕಥೆಯನ್ನು ತಾವು ಮತ್ತು ಈ ಸಭೆಯವರು ಕೇಳಬೇಕೆಂಬುದು ನನ್ನ ಆಸೆ...

ಅಧ್ಯಕ್ಷರು.—ಸಂದರ್ಭ ಬಂದಾಗ ತಾವು ಅದನ್ನೆಲ್ಲಾ ತಿಳಿಸಬಹುದು. ಆದರೆ ಸದ್ಯದ ಸಂದರ್ಭದಲ್ಲಿ ತಾವು ದಯಮಾಡಿ ಕುಳಿತುಕೊಳ್ಳಬೇಕು. ಈ ವಿಚಾರದಲ್ಲಿ ಸರ್ಕಾರದವರು ಹೇಳತಕ್ಕದ್ದೇನಾದರೂ ಇದೆಯೇ ?

ಶ್ರೀ ವಾಟಾಳ್ ನಾಗರಾಜ್.—ಸರ್ಕಾರದವರಿಗೆ ಏನು ಹೇಳಬೇಕಾದರೂ ಅವರಿಗೆ ಅಧಿಕಾರವಿದೆ. ಆದರೆ ಅವರು ಉತ್ತರ ಕೊಡುವುದಕ್ಕೆ ಮೊದಲು ಅಲ್ಲಿ ನಡೆದ ದುರಂತದ ಕಥೆಯೇನೆಂಬುದನ್ನು ಕೇಳಿ ಅನಂತರ ಉತ್ತರ ಕೊಡಲಿ. ಅದಕ್ಕೆ ನಾನು ಬೇಡವೆನ್ನುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇದನ್ನು ಒಂದು ನಿಲುವಳಿ ಸೂಚನೆಯ ರೂಪದಲ್ಲಿ ಚರ್ಚೆ ನಡೆಸುವುದಕ್ಕೆ ಅವಕಾಶವಿದೆಯೇ ಇಲ್ಲವೇ ಎನ್ನುವ ವಿಚಾರದಲ್ಲಿ ಅವರ ಅಭಿಪ್ರಾಯವನ್ನು ಸೂಚಿಸುವುದಾದರೆ ನನ್ನ ಅಭ್ಯಂತರವೇನಿಲ್ಲ. ಆದರೆ ಅವರು ಈ ವಿಚಾರದಲ್ಲಿ ಸರ್ಕಾರದವರ ಒಂದು ಸ್ಟೇಟ್‌ಮೆಂಟನ್ನು ಮಾಡುವುದಾದರೆ ಆದಕ್ಕೆ ನನ್ನ ಪ್ರತಿಭಟನೆಯುಂಟು. ಆಗ ಅಧ್ಯಕ್ಷರು ಇದರ ಮೇಲೆ ಮಾತನಾಡುವುದಕ್ಕೆ ನನಗೂ ಅವಕಾಶ ಕೊಡಬೇಕು.

ಅಧ್ಯಕ್ಷರು.—ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೇ ಬೇಡವೇ ಎಂಬುದನ್ನು ಕೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ಆ ಪ್ರಶ್ನೆ ತಮಗೆ ಸೇರಿದ್ದು. ಅಧ್ಯಕ್ಷರು ಇಷ್ಟಪಟ್ಟರೆ ಚರ್ಚೆಗೆ ಅವಕಾಶ ಕೊಡಬಹುದು, ಇಲ್ಲದಿದ್ದರೆ ಬಿಡಬಹುದು. ಆದರೆ ಸರ್ಕಾರದವರು ಉತ್ತರ ಕೊಡುವುದಾಗಿದ್ದರೆ ಅವರು ವಿಚಾರವನ್ನೇ ತಿಳಿಯದೆ ಉತ್ತರ ಕೊಡುವುದಕ್ಕೆ ಅವರಿಗೆ ಹಕ್ಕಿಲ್ಲದೆ ? ಅವರು ಅಲ್ಲಿ ನಡೆದಿರತಕ್ಕ ಅಕ್ರಮ ನಡವಳಿಕೆ—ದುರಾಡಳಿತ ಏನೆಂಬುವನ್ನು ತಿಳಿದು ಉತ್ತರ ಹೇಳಲಿ. ಅದಿಲ್ಲದೆ ಅವರು ಉತ್ತರ ಹೇಳತಕ್ಕದ್ದು ಸರಿಯಲ್ಲ.

†ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು).—ಮಾನ್ಯ ಸದಸ್ಯರು ಹೇಳುವುದನ್ನೆಲ್ಲಾ ಕೇಳುತ್ತ ಕುಳಿತರೆ ಅಲ್ಲಗೆ ಅವರು ಆ ಅಡ್ಜೆರ್ನ್‌ಮೆಂಟ್ ಮೋಷನ್ನನ್ನು ಮೂವ್ ಮಾಡಿದಂತೆಯೇ ಆಯಿತು...

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮುಖ್ಯ ಮಂತ್ರಿಗಳು ಕೋಪ ಮಾಡಿಕೊಂಡು ಮಾತನಾಡಬಾರದು...

ಶ್ರೀ ಡಿ. ದೇವರಾಜ ಅರಸ್.—ತಾವು ಮಾತು ಮಾತಿಗೂ ಸಿಟ್ಟುಮಾಡಿಕೊಂಡು ಮಾತನಾಡುತ್ತಿದ್ದೀರಿ. ನಾನು ಹಾಗೆ ಮಾತನಾಡತಕ್ಕವನಲ್ಲ. ಈಗ ಈ ವಿಚಾರದಲ್ಲಿ ಚರ್ಚೆಗೆ ಅವಕಾಶ ಕೊಡುವುದು ಅಥವಾ ಬಿಡುವುದು ಅಧ್ಯಕ್ಷರಿಗೆ ಸೇರಿದ್ದು. ಆದರೆ ಅಲ್ಲಿ ಆ ಪ್ರಕರಣ ನಡೆದಿರುವುದರ ಬಗ್ಗೆ ಹೇಳುವುದಾದರೆ ಶ್ರೀರಂಗಪಟ್ಟಣದ ಮುನಿಸಿಪಲ್ ಅಧ್ಯಕ್ಷರನ್ನು ಪೋಲೀಸಿನವರು ಅರೆಸ್ಟ್ ಮಾಡಿರುವುದು ನಿಜ. ಅವರ ಮೇಲೆ ಅಲಗೇಷನ್ ಇರುವುದು ಬಹಳ ಹೀನನ್ ಆದುದು. ಅವರು ಅಂಥಾ ಹೀನನ್ ಕೃತ್ಯ ಮಾಡಿದ್ದಾರೆ. ಒಬ್ಬ ಮುನಿಸಿಪಲ್ ಕೌನ್ಸಿಲರನ್ನು ಅವರು ಕಿಡ್ನಾಪ್ ಮಾಡಿದ್ದಾರೆ ಅಂತ ಅವರ ಮೇಲೆ ಅಪಾದನೆ ಇದೆ. ಆದಕ್ಕಾಗಿ ಪೋಲೀಸಿನವರು ಕಾನೂನು ಪ್ರಕಾರ ಏನು ಕ್ರಮ ಕೈಗೊಳ್ಳಬೇಕೋ ಅದನ್ನು ಅವರು ಕೈಗೊಂಡಿದ್ದಾರೆ. ಆದರೆ ಶ್ರೀಮಾನ್ ದೇವೇಗೌಡರು ಹೇಳತಕ್ಕ ರೀತಿಯಲ್ಲಿ ಅವರಿಗೆ ಹ್ಯಾಂಡ್ ಕಫ್ ಅನ್ನು ಹಾಕಿ ತೆಗೆದುಕೊಂಡು ಹೋದರು ಎಂದು ಹೇಳಿರುವುದು—ಆದರೆ ಅವರು ಬಹುಶಃ ಹೊಡೆದರೆಂಬುದಾಗಿ ಹೇಳಲಿಲ್ಲ ಎಂದು ಕಾಣುತ್ತೆ ಆದರೆ ನನಗೆ ಬಂದಿರುವ ವರದಿಯ ಪ್ರಕಾರ ಮತ್ತು ಶ್ರೀ ದೇವೇಗೌಡರಿಗೂ ಬಂದಿರತಕ್ಕ ವರದೀ ಪ್ರಕಾರ ಅವರನ್ನು ಹೊಡೆದಿದ್ದಾರೆ ಎನ್ನುವುದು ಸರಿಯಾದ್ದಲ್ಲ. 34 ಗಂಟೆಗಳ ಕಾಲ ಅವರನ್ನು ಕಾನೂನಿಗೆ ವಿರೋಧವಾಗಿ ಪೋಲೀಸ್ ಕಸ್ಟಡಿಯಲ್ಲಿ ಇಟ್ಟುಕೊಂಡಿದ್ದರು ಎಂಬುದೂ ಕೂಡ ಸರಿಯಾದ್ದಲ್ಲ. ಅವರನ್ನು ಕಾನೂನು ರೀತ್ಯ ಪೋಲೀಸ್ ಕಸ್ಟಡಿಯಲ್ಲಿಟ್ಟಿದ್ದಾರೆ. ಅವರನ್ನು ಅರೆಸ್ಟ್ ಮಾಡಿದ 24 ಗಂಟೆಯೊಳಗಾಗಿ ಮ್ಯಾಜಿಸ್ಟ್ರೇಟ್‌ರಿಂದ (ಅಪ್ಪಣೆ ಪಡೆದು) ಪರ್ಮಿಷನ್ ಪಡೆದು ಅವರನ್ನು ಪೋಲೀಸ್ ಕಸ್ಟಡಿಯಲ್ಲಡಲಾಗಿತ್ತು. ಇಂಡಿಯನ್ ಪೀನಲ್ ಕೋಡಿನ ಸೆಕ್ಷನ್ 365ರ

(ಶ್ರೀ ಡಿ. ದೇವರಾಜ್ ಅರಸ್)

ಪ್ರಕಾರ ಅವರು ತಕ್ಸೀರನ್ನು ಮಾಡಿದ್ದಾರೆ ಎಂದು ಅವರ ಮೇಲೆ ಛಾರ್ಜಾಗಿದೆ. ಅದು ಬಹಳ ದೊಡ್ಡ ಕೇಸು—ಕಿಡ್ನಾಪ್ ಕೇಸ್. ಅದು ನಾನ್ ಬೈಲಬಲ್ ಅಫೆನ್ಸ್. ಮ್ಯಾಜಿಸ್ಟ್ರೇಟರು ಅವರನ್ನು ಬೈಲ್ ಮೇಲೆ ಬಿಡುಗಡೆ ಮಾಡಿದ್ದರೂ ಕೆಲವು ನಿಯಮಾವಳಿಗಳನ್ನು ಅನುಸರಿಸಬೇಕು ಎಂಬ ಷರತ್ತಿನ ಮೇಲೆ ಅವರನ್ನು ಬಿಡುಗಡೆ ಮಾಡಲಾಗಿದೆ. ಇದು ಅಲ್ಲಿ ನಡೆದಿರುವ ಪ್ರಸಂಗ. ಇದರಲ್ಲಿ ಪೋಲೀಸಿನವರು ಅಲ್ಲಿ ಯಾವ ರೀತಿ ಎಕ್ಸೆಸ್ ವರ್ತನೆ ಮಾಡಿದ್ದಾರೆ ಅನ್ನುವುದರ ಬಗ್ಗೆ ನನ್ನ ಮುಂದಿರತಕ್ಕ ವರದಿ ಪ್ರಕಾರ ಅವರನ್ನು ಹೊಡೆದಿದ್ದಾರೆಂಬುದು ಸರಿಯಾದ್ದಲ್ಲ. ಅವರನ್ನು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದ್ದಾಗ, ಮತ್ತೆ ಎರಡಾವರ್ತಿ ಅವರನ್ನು ಕೋರ್ಟಿನ ಮುಂದೆ ಕರೆದುಕೊಂಡು ಹೋಗಿದ್ದಾಗ ಅವರು ಈ ಮಾತನ್ನು ಅಲ್ಲಿ ಹೇಳಿರುವುದಿಲ್ಲ. ಅವರಿಗೆ ಹ್ಯಾಂಡ್ ಕಫ್ ಹಾಕಿ ಅವರನ್ನು ಕರೆದುಕೊಂಡು ಹೋದರು ಎಂಬುದಾಗಿ ಶ್ರೀ ಎಚ್. ಡಿ. ದೇವೇಗೌಡರು ಹೇಳಿರುವುದು ನಿಜ. ಅವರನ್ನು ಹ್ಯಾಂಡ್ ಕಫ್ ಹಾಕಿ ತೆಗೆದುಕೊಂಡು ಹೋದುದು ಹೇಗೆ ತಪ್ಪು ಎನ್ನುವುದನ್ನು ಅಥವಾ ಅದೊಂದು ಅಪರಾಧವೇ ಎಂಬುದನ್ನು ನನಗೇ ನಾನಿನ್ನೂ ಸರಿಯಾಗಿ ಗೊತ್ತುಮಾಡಿಕೊಂಡಿಲ್ಲ. ಅದು ನನಗೇ ಸರಿಯಾಗಿ ಗೊತ್ತಾಗಿಲ್ಲ. ಕಾನೂನು ದೃಷ್ಟಿಯಲ್ಲಿ ಪ್ರಜಾಪ್ರಭುತ್ವದಲ್ಲಿ ನಾವೆಲ್ಲರೂ ಒಂದೇ. " ಇನ್ ದಿ ಐ ಆಫ್ ದಾ ಲಾ ಆರ್ ಆರ್ ಈಕ್ವಲ್ ".

ಶ್ರೀ ಎಸ್. ಬಂಗಾರಪ್ಪ.—ಓಬ್ಬ ಗೌರವಯುತ ವ್ಯಕ್ತಿಗೂ ಜೈಲಿನಲ್ಲಿದ್ದ...

ಶ್ರೀ ವಾಟಾಳ್ ನಾಗರಾಜ್.—ಆ ಮಾತು ತಮ್ಮ ಬಾಯಲ್ಲಿ ಬರಬಾರದು...

ಶ್ರೀ ಡಿ. ದೇವರಾಜ ಅರಸ್.—ನನ್ನ ಬಾಯಲ್ಲಿ ಬಾರದಿರುವುದು ನಿಮ್ಮ ಬಾಯಲ್ಲಿ ಬಾರಲು ಹೇಗೆ ಸಾಧ್ಯ ?

Sri C. M. ARUMUGAM.—I have got one submission. I am not disturbing the Hon. Chief Minister. He is making a statement. But while he is narrating the incident, he should not go to the extent of defending the Police because that amounts to argument and amounts to protecting the police force.

5-00 P.M.

MADAM SPEAKER.—I do not think you have heard him properly.

Sri D. DEVARAJ URS.—What is it ?

Sri C. M. ARUMUGAM.—You say all are equal before the eyes of law ?

Sri D. DEVARAJ URS.—Are you arguing about it ?

Sri C. M. ARUMUGAM.—If you take whip like that and say this is to be done, I do not take it. I must have an opportunity to say what I feel about it.

ಅಧ್ಯಕ್ಷರು.—ಅವರು ಹೇಳಿದ್ದನ್ನು ನಾನು ಬಹಳ ಗಮನವಿಟ್ಟು ಕೇಳಿದ್ದೇನೆ. ಅವರು ಈ ರೀತಿ ಏನೂ ಹೇಳಲಿಲ್ಲ.

Sri C. M. ARUMUGAM.—He says that under the law every body is equal and when I want to explain, the Chief Minister said I am arguing. Is that the way the Chief Minister should address me. If I am not honoured here, I am not honoured anywhere.

ಅಧ್ಯಕ್ಷರು.—ನೀವು ಸರಿಯಾಗಿ ತಿಳಿದುಕೊಳ್ಳದೆ ಮಾತನಾಡುತ್ತಿದ್ದೀರಿ. ನಾನು ಅವರು ಹೇಳುವುದನ್ನು ಬಹಳ ಗಮನವಿಟ್ಟು ಕೇಳುತ್ತಿದ್ದೆ.

Sri C. M. ARUMUGAM.—I have great respect to you, Madam Speaker. I have come here to protect my personal self-respect and the respect of the people who elected me to this House. The Chief Minister must address me as the Hon'ble Member of the House. I am saying it a thousand times. If he tries to minimise my importance, I must say that my self-repect is more than anything else. I need not be handled in that way. I need not be addressed as the Chief Minister addressed me just now. I will create trouble in this House if my self-respect is not protected. Madam Speaker you must protect me and protect my self-respect and treat me as an Hon'ble Member of this House.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಈ ವಿಷಯ ಬಹಳ ಮುಖ್ಯವಾದುದು. ಇದರಮೇಲೆ ನಾನು ಸ್ವಲ್ಪ ಮಾತನಾಡಬೇಕಾಗಿದೆ. ಈ ಮಾನ್ಯ ಸಭೆಯ ಸದಸ್ಯರು ಯಾರೇ ಆಗಿರಲಿ, ಅವರು ಮುಖ್ಯ ಮಂತ್ರಿಗಳಾಗಿರಬಹುದು ಅಥವಾ ಮಂತ್ರಿಗಳಾಗಿರಬಹುದು, ಅಥವಾ ಇತರ ಸದಸ್ಯರಾಗಿರಬಹುದು.

Sri C. M. ARUMUGAM.—Let it be anybody. Let it be even God himself. Even if God were to come, I will ask God himself. No body is above me.

ಶ್ರೀ ಎಸ್. ಬಂಗಾರಪ್ಪ.—ಈ ಸದನದ ಗೌರವವನ್ನು ಕಾಪಾಡುವುದು ಎಲ್ಲರಿಗೂ ಸೇರಿದ ವಿಷಯವಾಗಿದೆ, ಅದಕ್ಕೆ ಎಲ್ಲರೂ ಜವಾಬ್ದಾರರು. ನಾವು ಮಾತ್ರ ಇಲ್ಲಿರುವುದು, ಬೇರೆಯವರಿಲ್ಲ ಎಂದು ತಿಳಿಯಬಾರದು. ಈ ಸಭೆಯ ಗೌರವವನ್ನು ಕಾಪಾಡಬೇಕೆಂಬ ಸೂಚನೆ ಮತ್ತು ಉದ್ದೇಶ ಬಹಳ ಸೂಕ್ತವಾಗಿದೆ. ಈ ಬಗ್ಗೆ ಮುಖ್ಯಮಂತ್ರಿಗಳ ಮೇಲೆ ಸಭಾನಾಯಕರಮೇಲೆ ಮಾತ್ರವಲ್ಲದೆ ಅವರ ಮಂತ್ರಿಮಂಡಲದಮೇಲೂ ಕೂಡ ಹೆಚ್ಚಿನ ಜವಾಬ್ದಾರಿ ಇದೆ. ಅವರು ಬಹಳ ಜವಾಬ್ದಾರಿಯಿಂದ ವರ್ತಿಸಬೇಕು. ಈ ಕಡೆಯ ಸದಸ್ಯರಿಗೂ ಕೂಡ ಅವರಷ್ಟೇ ಜವಾಬ್ದಾರಿ ಇದೆ. ನಾವೂ ಕೂಡ ಜನತೆಯಿಂದ ಆರಿಸಿ ಬಂದಿದ್ದೇವೆ, ನಮಗೂ ಕೂಡ ಸಾಕಷ್ಟು ತಿಳಿವಳಿಕೆ ಇದೆ. ನಮಗೆ ಜವಾಬ್ದಾರಿ ವಿಷಯದಲ್ಲಿ ಯಾರೂ ಹೇಳಿಕೊಡಬೇಕಾಗಿಲ್ಲ. ಮಾತನಾಡಬೇಕಾದರೆ ಮಾನ್ಯ ಸಭಾನಾಯಕರು ಬಹಳ ಸಂಯಮವಿಟ್ಟುಕೊಳ್ಳಬೇಕು. ಹಾಗೆ ಮಾಡಿದರೆ ಒಳ್ಳೆಯದು. ಇಂದು ಮಾನ್ಯ ಮುಖ್ಯ ಮಂತ್ರಿಗಳ ಭಾಷಣವನ್ನು ನಾನು ಸಾವಧಾನವಾಗಿ ಕೇಳಿದೆ. ಅವರು ಮಾತನಾಡುವಾಗ ಶ್ರೀ ವಾಟಾಳ್ ನಾಗರಾಜರವರನ್ನು ಕುರಿತು ಆಯ್ಯಾ ಮಹಾರಾಯ ಎಂದು ಹಾವಭಾವದಿಂದ ಹೇಳಿದರು. ಅದನ್ನು ಮಾನ್ಯ ಅಧ್ಯಕ್ಷರೂ ಗಮನಿಸಿರಬಹುದು. ಶ್ರೀ ಆರ್ಮುಗಂರವರ ಬಗ್ಗೆ ಮುಖ್ಯ ಮಂತ್ರಿಗಳು ಅವರ ಮನನೋಯುವಂತೆ ಹೇಳಿರುವುದು ಸರಿಯಲ್ಲ ಎಂಬುದನ್ನು ಅವರು ತಿಳಿಯಬೇಕು. ಆರ್ಮುಗಂರವರು ಯಾವಾಗಲೂ ಹೀಗೆ ಮಾತನಾಡುವವರಲ್ಲ, ಅವರು ಬಹಳ ಸಂಯಮದಿಂದ ವರ್ತಿಸತಕ್ಕವರು. ಮಾತನಾಡುವ ಭರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹೇಳುವುದು ಒಂದೊಂದು ವೇಳೆ ಅಪಾರ್ಥಕ್ಕೆ ಎಡೆಕೊಡುವುದು. ಅದರಿಂದ ಇನ್ನೊಬ್ಬರ ಮನಸ್ಸಿಗೆ ನೋವಾಗುವುದು. ಅದರಿಂದ ಸಭೆಯ ಗೌರವಕ್ಕೆ ಕುಂದುಕ ಉಂಟಾಗುವುದು. ಆ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಆರ್ಮುಗಂರವರ ಮನಸ್ಸಿಗೆ ನೋವುಂಟಾಗುವಂತೆ ಆಡಿರುವ ಮಾತನ್ನು ದಯಯಿಟ್ಟು ವಾಪಸು ತೆಗೆದುಕೊಳ್ಳ ಬೇಕೆಂದು ನಾನು ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಸಭಾನಾಯಕರು ಆಡಿದ ಮಾತು ಮಾನ್ಯ ಆರ್ಮುಗಂರವರ ಮನಸ್ಸಿಗೆ ನೋವನ್ನುಂಟುಮಾಡಿದೆ, ಇಲ್ಲದಿದ್ದರೆ ಅವರು ಇಷ್ಟೊಂದು ಮಾತನಾಡುತ್ತಿರಲಿಲ್ಲ. ಅವರ ಮನಸ್ಸಿಗೆ ವೇದನೆಯಾಗಿದೆ. ಅದು ಹೋಗಬೇಕಾದರೆ, ಒಂದು ಒಳ್ಳೆಯ ವಾತಾವರಣವುಂಟಾಗಬೇಕಾದರೆ ಮಾನ್ಯ ಮಂತ್ರಿಗಳು ಅವರ ಮನನೋಯುವಂತೆ ಆಡಿದ ಮಾತನ್ನು ದಯಯಿಟ್ಟು ವಾಪಸು ತೆಗೆದುಕೊಳ್ಳಬೇಕು. ಹಾಗೆ ಮಾಡಿದರೆ ಸಭೆಯ ಕಾರ್ಯಕಲಾಪಗಳು ಸುಗಮವಾಗಿ ನಡೆಯಲು ಅವಕಾಶವಾಗುವುದು. ಹಾಗೆ ಮಾಡಬೇಕು. ಇನ್ನುಮುಂದೆ ಈ ರೀತಿಯಾಗಲು ಅವಕಾಶ ಕೊಡಬಾರದು ಎಂದು ಮನವಿಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರಲ್ಲಿ ಒಂದು ಕಳಕಳಿಯ ವಿನಂತಿಮಾಡಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ಧಾಟಿ ಸರಿಯಾಗಿ ಕಾಣಲಿಲ್ಲ. ಅವರು ತಾಳ್ಮೆಯನ್ನು ಬಹು ಬೇಗ ಕಳೆದುಕೊಳ್ಳುವರು. ಹಿಂದೆ ಹದಿನೈದು ದಿವಸಗಳ ಕಾಲ ಸಭೆ ಸೇರಿದಾಗ ಕೂಡ ಹೀಗೆಯೇ ಆಯಿತು. ಇಂದು ಅವರು ಸಭೆಗೆ ಬಂದಾಗ ನಗುತ್ತಾ ಇದ್ದರು. ಆದರೆ ಈಗ ತಾಳ್ಮೆ ಕಳೆದು ಕೊಂಡಿದ್ದಾರೆ. ತಕ್ಷಣ ಅವರು ಕೋಪಮಾಡಿಕೊಳ್ಳುವರು.

ಅಧ್ಯಕ್ಷರು.—ತಾವು ಸ್ವಲ್ಪ ಕುಳಿತುಕೊಳ್ಳಿ, ನಾನು ಹೇಳುತ್ತೇನೆ. ಅಪರಾಧದ ಮಾತು ಅವರು ಹೇಳಿದ್ದೇನೆಂದರೆ, You are arguing about it ಎಂದು ಅದು ಅಷ್ಟು ಒಂದು ಅಪರಾಧದ ಮಾತು ಅಲ್ಲ.

ಶ್ರೀ ವಾಟಾಳ್ ನಾಗರಾಜ್.—ನಾನು ಹೇಳುವುದು ನಮ್ಮ ಮಾತನ್ನು ಕೇಳಿ ತಾಳ್ಮೆಯಿಂದ ಉತ್ತರ ಕೊಡಲಿ ಎಂದು.

ಅಧ್ಯಕ್ಷರು.—ನಿಮ್ಮ ಉಪದೇಶ ಆಯಿತು. ಈಗ ಅವರು ಹೇಳುವುದನ್ನು ತಾವು ತಾಳ್ಮೆಯಿಂದ ಕೇಳಿ. ಈಗ ಅವರು ಈ ಸೂಚನೆಯನ್ನು ಚರ್ಚೆಗೆ ತೆಗೆದುಕೊಳ್ಳಬೇಕೇ ಬೇಡವೇ ಎಂದು ಹೇಳುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ.—ಈ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕೇ ಬೇಡವೇ ಎನ್ನುವ ವಿಷಯದಲ್ಲಿ ಅವರಿಂದ ವಿವರಣೆ ಕೇಳುವುದಾದರೆ ಅದನ್ನು ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ನಾನು ವಿವರಣೆ ಕೊಡಬೇಕಾಗಿದೆ. ಮೆರಿಟ್ ಬಗ್ಗೆ ನಾನು ಮಾತನಾಡಿಲ್ಲ. ನಾನು ಕೊಟ್ಟಿರತಕ್ಕ ಅಡ್‌ಜರ್ನಮೆಂಟ್ ಮೋಷನ್ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಗಹನವಾದ ವಿಷಯ ಎಂದು ಸಂಕ್ಷಿಪ್ತವಾಗಿ ಹೇಳಿದೆ. ಪೋಲೀಸ್ ರಿಪೋರ್ಟ್ ಆಧಾರದಮೇಲೆ ಅವರ ಅಭಿಪ್ರಾಯ ತೆಗೆದುಕೊಂಡು ತಾವು ಕನ್ಸೆಂಟ್ ಕೊಡುವುದು ಬಿಡುವುದು ಎಂದು ನಿರ್ಣಯಕ್ಕೆ ಬರುವುದಾದರೆ, ನನಗೆ ಅದರ ಬಗ್ಗೆ ವಿವರಣೆ ಕೊಡಲು ಪುನಃ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ತಾವು ಹೇಳುವುದು ಎಲ್ಲವನ್ನೂ ಹೇಳಿದಿರಿ. ನಾನು ಕನ್ಸೆಂಟ್ ಕೊಡಬೇಕೇ ಬೇಡವೇ ಎನ್ನುವುದನ್ನು ಯೋಚನೆ ಮಾಡಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಇದರ ಬಗ್ಗೆ ನಾನು ಪೂರ್ಣವಾದ ಮಾಹಿತಿ ಸಭೆಯ ಮುಂದೆ ಇಟ್ಟಿಲ್ಲ, ನನ್ನ ಸೂಚನೆಗೆ ಅನುಮತಿ ಕೊಟ್ಟರೆ. ಇದರ ಬಗ್ಗೆ ಚರ್ಚೆಮಾಡುವುದಕ್ಕೆ ಸಾಧ್ಯವಿತ್ತು, ಪೂರ್ಣ ಮಾಹಿತಿಯನ್ನು ಸಭೆಯ ಮುಂದೆ ಇಡುವುದಕ್ಕೆ ಅವಕಾಶವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಕನ್ಸೆಂಟ್ ಕೊಡಬೇಕೇ, ಬೇಡವೇ ಎನ್ನುವುದು ತಮಗೆ ಬಿಟ್ಟ ವಿಷಯ.

ಅಧ್ಯಕ್ಷರು. ಎರಡು ಕಡೆ ಕೇಳಿ ಬಿಟ್ಟು ತಾವೇ ಕನ್ಸೆಂಟ್ ಕೊಡಬೇಕು ? ತಾವು ಹೇಳುವುದು ಹೇಳಿದ್ದೀರಿ. ಅವರು ಹೇಳುವುದನ್ನು ಹೇಳುತ್ತಾರೆ ಕೇಳಿ.

† ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ನಿಯಮಾವಳಿಗಳ ಪ್ರಕಾರ ನಿಲುವಳಿ ಸೂಚನೆಯನ್ನು ಹೇಗೆ ತೆಗೆದುಕೊಳ್ಳಬೇಕು ಎನ್ನುವ ವಿಷಯಕ್ಕೆ ನಾನು ಈಗ ಗಮನ ಕೊಡುತ್ತೇನೆ. ಅದಕ್ಕೆ ಯಾವಾಗ ಒಪ್ಪಿಗೆ ಕೊಡಬೇಕು ಯಾವಾಗ ಚರ್ಚೆಗೆ ತೆಗೆದುಕೊಳ್ಳಬೇಕು ಎನ್ನುವ ವಿಷಯ ಹೇಳಿದೆ. ರೂಲ್ 54 ಕ್ಲಾಸ್ (1) ಹೀಗೆ ಹೇಳುತ್ತದೆ.

> "The Speaker, if he gives consent under rule 50 and holds that the matter proposed to be discussed is in order, shall after the questions and before the list of business is entered upon, call the member concerned who shall rise in his place and ask for leave to move the adjournment of the Assembly".
>
> "Provided that where the Speaker has refused his consent under rule 50 or is of opinion that the matter proposed to be discussed is not in order, he may, if he thinks it necessary, read the notice of motion and state the reasons for refusing consent or holding the motion as not being in order."

ನಾನು ಕಳುಹಿಸಿರುವುದು ಆರ್ಡರ್‌ನಲ್ಲಿ ಇದೆಯೇ, ಇಲ್ಲವೇ ಎನ್ನುವುದಕ್ಕೆ ಇದು ಸಂಬಂಧಪಟ್ಟಿದೆ. ಇನ್ನು ಕನ್ಸೆಂಟ್ ಕೊಡಬೇಕೇ ಬೇಡವೇ ಎನ್ನುವುದಕ್ಕೆ ಬೇರೆ ರೂಲ್ ಇದೆ. ಕ್ಲಾಸ್ (2) ಹೀಗೆ ಹೇಳಿದೆ.

"(2) If objection to leave being granted is taken the Speaker shall request those members who are in favour of leave being granted to rise in their places, and if not less than twenty members rise accordingly, the Speaker shall intimate that leave is granted. If less than twenty members rise, the Speaker shall inform the member that he has not the leave of the Assembly."

ನಾನು ಏತಕ್ಕೆ ರೂಲ್ಸ್ ಓದಿದೆ ಎಂದರೆ ತಾವು ತಮ್ಮ ಕನ್ಸೆಂಟ್ ಕೊಡಬೇಕೇ ಬೇಡವೇ ಎನ್ನುವ ಬಗ್ಗೆ 20 ಜನ ರೂಲ್ಸ್ ಪ್ರಕಾರ ಎದ್ದು ನಿಂತರೆ ತಾವು ಕನ್ಸೆಂಟ್ ಕೊಡಬೇಕು. ಆದರೆ ಸ್ಟೇಟ್‌ಮೆಂಟ್ ಸರ್ಕಾರದ ವತಿಯಿಂದ ಕೊಡಬೇಕು ಅಥವಾ ಕೇಳಬೇಕು ಎನ್ನುವುದು ಎಲ್ಲಿಯೂ ಕೂಡ ಬರವಣಿಗೆಯಲ್ಲಿ ಇಲ್ಲ. ಆದುದರಿಂದ ಮುಖ್ಯಮಂತ್ರಿಗಳು ಹೇಳಿರತಕ್ಕ ಹೇಳಿಕೆ ನಿಯಮಾವಳಿ ಪ್ರಕಾರ ವಿರುದ್ಧವಾಗುತ್ತದೆ. ಅವರು ಹೇಳುವ ಸ್ಟೇಟ್‌ಮೆಂಟ್‌ನ್ನು ಕೇಳಿ ತಾವು ಕನ್ಸೆಂಟ್ ಕೊಡಬೇಕೇ ಬೇಡವೇ ಎನ್ನುವುದಕ್ಕೆ ರೂಲ್ ಪರ್ಮಿಷನ್ ಕೊಡುವುದಿಲ್ಲ. ಈ ದೃಷ್ಟಿಯಿಂದ ನಾವು ಕೊಟ್ಟಿರುವ ನಿಲುವಳಿ ಸೂಚನೆ ಆರ್ಡರ್ ಪ್ರಕಾರ ಇದೆಯೇ ಇಲ್ಲವೇ ಎನ್ನುವುದು ಒಂದು. ಅದಕ್ಕೆ ಲೀವ್ ಕೊಡಲು 20 ಜನ ಸಪೋರ್ಟ್ ಮಾಡುವುದಕ್ಕೆ ಇದ್ದಾರೆ, ಲೀವ್ ಇದೆ ಎನ್ನುವುದು. ಎರಡನೆಯದು ಕನ್ಸೆಂಟ್ ಕೊಡುವ ಬಗ್ಗೆ ಒಂದೆರಡು ವಿಷಯಗಳನ್ನು ಮೆರಿಟ್‌ಮೇಲೆ ಮಾತನಾಡಬೇಕೆಂದು ಶ್ರೀ ದೇವೇಗೌಡರು ಉದ್ದೇಶಪಟ್ಟರು. ನನ್ನ ಹತ್ತಿರ ಕೂಡ ಒಂದು ಟೈಪ್‌ಡ್ ಕಾಫಿ ಇದೆ. ಅನೇಕ ವಿಷಯಗಳ ಬಗ್ಗೆ ನಾನು ಹೇಳಬೇಕಾಗಿದೆ. ಆದರೆ ರೂಲ್ಸ್ ಪ್ರಕಾರ ನಾವು ಹೇಳುವ ಹಾಗಿಲ್ಲ. ಅವರು ಸ್ಟೇಟ್‌ಮೆಂಟ್ ಮಾಡುವ ಹಾಗಿಲ್ಲ. ಶ್ರೀ ದೇವೇಗೌಡರು ಒಂದು ಅಂಶ ಪ್ರಸ್ತಾಪಮಾಡಿ ಹಾಗೆ ಕೂತರು, ನಾನು ಕೂಡ ಹಾಗೆ ಎದ್ದು ಒಂದು ಅಂಶ ಮಾತನಾಡಿದೆ. ನಾನು ಕೂಡ ಈ ಘಟನೆ ಬಗ್ಗೆ ಇನ್ನೂ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಬೇಕೆಂದು ಇದ್ದರೂ ರೂಲ್ ಪ್ರಕಾರ ಅದಕ್ಕೆ ಬಹಿಷ್ಕಾರ ಇದೆ. ಆ ದೃಷ್ಟಿಯಿಂದ ವಿಷಯ ಸಂಪೂರ್ಣವಾಗಿ ಹೇಳಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಸಂಪೂರ್ಣ ಸ್ಟೇಟ್‌ಮೆಂಟ್ ಮಾಡಿದರೆ, ನಾಳೆ ವಿರೋಧ ಪಕ್ಷದವರು ಹೇಳಿದ್ದು ಅರ್ಥಹೀನ, ಸರಕಾರಣವಲ್ಲ ಸರ್ಕಾರದ ವತಿಯಿಂದ ಸ್ಟೇಟ್‌ಮೆಂಟ್ ಮಾಡಿದ್ದು ಸರಿ ಎಂದು ಸಾರ್ವಜನಿಕರಿಗೆ ತಪ್ಪು ಅರ್ಥಕ್ಕೆ ಎಡೆ ಕೊಡುತ್ತದೆ. ಮುಖ್ಯಮಂತ್ರಿಗಳು ಹೇಳುವುದನ್ನು ಕಾನೂನು ವಿರುದ್ಧವಾದುದರಿಂದ ನಿಲ್ಲಿಸಬೇಕು. ರೂಲ್ಸ್ ಪ್ರಕಾರ ಅವರು ಸ್ಟೇಟ್‌ಮೆಂಟ್ ಕೊಡುವ ಹಾಗಿಲ್ಲ.

ಅಧ್ಯಕ್ಷರು.— ನಾನು ಗಾಳಿಯಲ್ಲಿ ಕನ್ಸೆಂಟ್ ಕೊಡುವುದಕ್ಕೆ ಬರುವುದಿಲ್ಲ, ನನಗೆ ಫ್ಯಾಕ್ಟ್ ಗೊತ್ತಾಗಬೇಕು.

ಶ್ರೀ ಎಚ್. ಡಿ. ದೇವೇಗೌಡ.— ತಾವು ಕನ್ಸೆಂಟ್ ಕೊಡಬೇಕೇ, ಬೇಡವೇ, ತಮ್ಮ ತೀರ್ಮಾನ ವೇನು ಎನ್ನುವುದನ್ನು ನಿರ್ಧಾರ ಮಾಡಲು ಸರ್ಕಾರದ ವತಿಯಿಂದ ಪೂರ್ಣ ಮಾಹಿತಿ ತೆಗೆದು ಕೊಳ್ಳುವ ಹಾಗೆಯೇ ನಮ್ಮ ಕಡೆ ಇರುವ ಮಾಹಿತಿಯನ್ನು ನಾವು ಪೂರ್ಣ ಕೊಡುವುದಕ್ಕೆ ತಾವು ನಮಗೆ ಅವಕಾಶ ಕೊಡಬೇಕು. ಆಗ ನಾವು ನಮ್ಮ ಹತ್ತಿರ ಏನೇನು ಮಾಹಿತಿ ಇದೆ, ಅದನ್ನು ತಮ್ಮ ಮುಂದೆ ಇಡುತ್ತೇವೆ.

ಅಧ್ಯಕ್ಷರು.—ಈ ರೀತಿ ಮಾಡಿದರೆ ಅಡ್ಜರ್ನ್‌ಮೆಂಟ್ ಮೋಷನ್ ಮೂವ್ ಮಾಡಬೇಕಾಗಿಲ್ಲ, ಅದಕ್ಕೆ ನನ್ನ ಕನ್ಸೆಂಟ್ ಬೇಕಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಪ್ರೊಸೀಜರ್ ಏನು ಅಡಾಪ್ಟ್ ಮಾಡುತ್ತೀರಿ ಅದು ಒನ್ ಸೈಡೆಡ್ ಆಗಿರಬಾರದು.

ಅಧ್ಯಕ್ಷರು.—ಸ್ಪೀಕರ್ ಡಿಸ್‌ಕ್ರಿಷನ್ ಇದೆ ಎಂದು ಹೇಳಿದ ಮೇಲೆ, ನನಗೆ ಎರಡು ಕಡೆಯ ವಿಚಾರವೂ ಗೊತ್ತಾಗದೆ ನನ್ನ ಅಭಿಪ್ರಾಯ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ತಮಗೆ ಪೂರ್ಣ ಮಾಹಿತಿ ಬೇಕು ಎಂದು ಹೇಳುವುದಾದರೆ ನಮ್ಮ ಕಡೆಗೂ ಅವಕಾಶ ಕೊಡಬೇಕಾಗುತ್ತದೆ. ಆ ರೀತಿ ಮಾಡುವುದಾದರೆ ನಾನು ಒಪ್ಪಿಕೊಳ್ಳುತ್ತೇನೆ.

ಅಧ್ಯಕ್ಷರು.—ತಾವು ಇಬ್ಬರೂ ಹೇಳುವುದನ್ನು ಹೇಳಿದ್ದೀರಿ, ಈಗ ಮುಖ್ಯ ಮಂತ್ರಿಗಳು ಹೇಳುವುದನ್ನು ಹೇಳಿಬಿಡಲಿ.

ಶ್ರೀ ವಾಟಾಳ್ ನಾಗರಾಜ್.—ಅವರು ಹೇಳುವುದು ಕನ್‌ಕಾಕ್ಟೆಡ್ ಪೋಲೀಸ್ ವರದಿ. ಹೋಂ ಸೆಕ್ರೆಟರಿಯವರು ಏನು ವರದಿ ಕೊಟ್ಟಿದ್ದಾರೆ ಅಷ್ಟೇ ಮುಖ್ಯ ಮಂತ್ರಿಗಳು ಹೇಳುತ್ತಾರೆ ಬೇರೆ ಏನೂ ಇಲ್ಲ. ಇದು ಸರಿಯಲ್ಲ ನಾವು ಹೇಳುವುದಕ್ಕೆ ನಮಗೆ ಅವಕಾಶ ಕೊಡಬೇಕು.

ಶ್ರೀ ಎಸ್. ಬಂಗಾರಪ್ಪ.—ನನ್ನ ಪಾಯಿಂಟ್ ಆಫ್ ಆರ್ಡರ್ ಬಗ್ಗೆ ರೂಲಿಂಗ್ ಬರಲಿಲ್ಲ.

ಅಧ್ಯಕ್ಷರು.—ಆ ಕಡೆ ಏನು ಹೇಳುತ್ತಾರೆಂದು ಕೇಳಿದಮೇಲೆ ನನ್ನ ರೂಲಿಂಗ್ ಕೊಡುತ್ತೇನೆಂದು ಹೇಳಿದ್ದೇನೆ.

Sri R. GUNDU RAO (Somwarpet).—I rise on a point of order, Madam. Under rule 53, since this matter is before the court, it is sub judice, and so this matter cannot be raised by way of a motion.

ಶ್ರೀ ವಾಟಾಳ್ ನಾಗರಾಜ್.—ತಿರುಗಿ ಸ್ಟೇಷನ್‌ನಲ್ಲಿ ಇಟ್ಟುಕೊಳ್ಳುವುದಕ್ಕೆ ಕೋರ್ಟಿಗೆ ಹೇಳಿದ್ದಾರೆ.

ಅಧ್ಯಕ್ಷರು.—ಮುಖ್ಯಮಂತ್ರಿಗಳು ಏನು ಹೇಳುತ್ತಾರೆ ಅದನ್ನು ದಯವಿಟ್ಟು ಕೇಳಿ.

†ಶ್ರೀ ಡಿ. ದೇವರಾಜ್ ಅರಸ್.—ನಾನು ನಿಲ್ಲಿಸಿದ ಮಾತು ಎಲ್ಲಿಗೆ ಎಂದರೆ, ಕಾನೂನಿಗೆ ಎಲ್ಲರೂ ಸಮಾನರು ಎಂದು. ಅದನ್ನೇ ಹೇಳುತ್ತಾ, ಕಾನೂನು ಬಿಟ್ಟು, ಕಾನೂನಿಗೆ ದೂರವಾಗಿ ಏನಾದರೂ ಅಚಾತುರ್ಯ ನಡೆದಿದೆಯೇ ಎಂದು ಮಾನ್ಯ ಎದುರು ಪಕ್ಷದ ನಾಯಕರಾದ ಶ್ರೀಮಾನ್ ದೇವೇಗೌಡರು ಏನು ಅನುಮಾನ ವ್ಯಕ್ತಪಡಿಸಿದ್ದಾರೆ ಅದನ್ನು ಪರಿಶೀಲನೆ ಮಾಡಿ ಕಾನೂನಿಗೆ ವಿರುದ್ಧವಾಗಿ ಏನಾದರೂ ನಡವಳಿಕೆ ನಡೆದಿದ್ದರೆ ಅಂತಹ ನಡೆವಳಿಕೆಯನ್ನು ತಪ್ಪಿಸಬೇಕಾದ್ದು ನಮ್ಮ ಕರ್ತವ್ಯ. ಮುತ್ತು ಆ ರೀತಿ ನಡೆದವರು ಯಾರೇ ಅಧಿಕಾರಿಗಳಾಗಿರಲಿ ಅವರು ಶಿಕ್ಷೆಗೆ ಒಳಗಾಗಬೇಕಾಗುತ್ತದೆ. ಅದನ್ನು ಪರೀಕ್ಷೆ ಮಾಡಿಸುತ್ತೇನೆ. ರಾಜಕೀಯವಾಗಿ ಯಾರ ಮೇಲೋ ಹಲ್ಲೆ ಮಾಡಿಸಿದ್ದಾರೆ ಅಥವಾ ಸರ್ಕಾರ ವಿರೋಧ ಪಕ್ಷಗಳನ್ನೆಲ್ಲಾ ತುಳಿಯುವ ದೃಷ್ಟಿಯಿಂದ ಏನಾದರೂ ಮಾಡುತ್ತಿದ್ದಾರೆ ಎನ್ನುವ ಅಭಿಪ್ರಾಯ ಬರುವ ನಡವಳಿಕೆ ನಡೆದಿದೆ ಎಂದು ಹೇಳುತ್ತಾ ಇದ್ದ ಹಾಗೆ ಕಾಣುತ್ತದೆ. ಅವರು ಆ ರೀತಿಯ ಅಭಿಪ್ರಾಯ ಪಟ್ಟಿಲ್ಲ ಎಂದು ನನ್ನ ನಂಬಿಕೆ. ನಾನು ಸ್ಪಷ್ಟಪಡಿಸಿ ಈಗಲೂ ಹೇಳುತ್ತೇನೆ, ಹಿಂದೆಯೂ ಹೇಳಿದ್ದೇನೆ. ಕಾನೂನು ದುರುಪಯೋಗ ಮಾಡಿಕೊಂಡು ಎದುರಾಳಿಗಳನ್ನು ಅಥವಾ ವಿರೋಧ ಪಕ್ಷದವರನ್ನು ದಮನ ಮಾಡಬೇಕು ಎನ್ನತಕ್ಕದ್ದು ಎಳ್ಳಷ್ಟು ನನ್ನ ಮನಸ್ಸಿನಲ್ಲಿಲ್ಲ. ಅಂತಹದ್ದನ್ನು ಯಾರೇ ಮಾಡಿದರೂ ಅದು ತಪ್ಪು, ಅಧರ್ಮ. ಆದ್ದರಿಂದ ನಾನಂತೂ ಅಂತಹ ಅಧರ್ಮಕ್ಕೆ ಕೈಹಾಕುವವನಲ್ಲ ಎಂದು ಸ್ಪಷ್ಟಪಡಿಸಿ ಹೇಳುತ್ತೇನೆ. ಅಂತಹ ರೀತಿಯಲ್ಲಿ ರಾಜಕೀಯವಾಗಿ ಗೆಲ್ಲಬೇಕಾದ ಅಗತ್ಯವಿಲ್ಲ. ಗೆಲುವು ಸೋಲು ಚಕ್ರಾಕಾರವಾಗಿ ಹೋಗುತ್ತದೆ. ಒಂದು ಸಾರಿ ನಾನು ಇರುತ್ತೇನೆ, ಇನ್ನೊಂದು ಸಾರಿ ಇನ್ನೊಬ್ಬರು ಇರುತ್ತಾರೆ. ಇದನ್ನು ನಾನು ಸ್ಪಷ್ಟವಾಗಿ ರಾಜಕೀಯದಲ್ಲಿ ತಿಳಿದುಕೊಂಡವನಾದ್ದರಿಂದ ಇಂಥದ್ದಕ್ಕೆ ನಾನು ಕೈಹಾಕಬೇಕಾದ ಅಗತ್ಯವಿಲ್ಲ, ನನ್ನ ಪಕ್ಷಕ್ಕೂ ಅಗತ್ಯವಿಲ್ಲ. ಆದ್ದರಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಅಂತಹ ಅನುಮಾನವನ್ನು ಇಟ್ಟುಕೊಳ್ಳಬೇಕಾಗಿಲ್ಲ. ಈ ಒಂದು ಸಂದರ್ಭದಲ್ಲಿ ಒಂದು ಮಾತು ಹೇಳುವುದು ಏನೆಂದರೆ ಕಾನೂನನ್ನು ಸರಾಗವಾಗಿ ನಡೆದುಕೊಂಡು ಹೋಗುವಂತೆ Law must take its own course. ನೋಡುವ ಕರ್ತವ್ಯ ಸರ್ಕಾರಕ್ಕಿದೆ. ಹಾಗೆ ಇಲ್ಲದೆ ಹೋದರೆ ದೇಶದಲ್ಲಿ ಅಶಕ್ತ ಜನರಿಗೆ ಬಹಳ ತೊಂದರೆಯಾಗುತ್ತದೆ. ಯಾರೇ ಆಗಲೀ ಒಂದು ಅಧಿಕಾರದ ಸ್ಥಾನದಿಂದ ಕಾನೂನಿಗೆ ದೂರವಾಗಿ ಅವರು ವರ್ತನೆ ಮಾಡುವುದಕ್ಕೆ ಹೊರಟಾಗ, ಆ ವರ್ತನೆಯನ್ನು ತುಳಿಯುವುದಬೇಕಾಗುತ್ತದೆ. ಯಾರ ಒಂದು ಸ್ವಾತಂತ್ರ್ಯ ಮೊಟಕಾಗುತ್ತದೋ ಅಂತಹ ಕಾಲದಲ್ಲಿ ಸರ್ಕಾರ ಸ್ವಲ್ಪವೂ ಹಿಂದು ಮುಂದು ನೋಡದೆ ಅವರಿಗೆ ಪೂರ್ಣವಾಗಿ ಎಲ್ಲ ರಕ್ಷಣೆ ಕೊಡಬೇಕಾದಂಥ ಪ್ರಥಮ ಜವಾಬ್ದಾರಿ ಸರ್ಕಾರಕ್ಕಿದೆ. ಅಂತಹ ಜವಾಬ್ದಾರಿಯನ್ನು ನಿರ್ವಹಣೆ ಮಾಡಬೇಕಾದ ಸಂದರ್ಭದಲ್ಲಿ ಅಧಿಕಾರಿಗಳು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿದರೆ ಅಧಿಕಾರಿಗಳ ತಪ್ಪು ಎಂದು ಹೇಳುವುದಕ್ಕಾಗುವುದಿಲ್ಲ. ಅವರಿಗೂ ಜವಾಬ್ದಾರಿ ಇದೆ. ಅದನ್ನು ನರಿಯಾಗಿ ಮಾಡಲೇಬೇಕಾಗುತ್ತದೆ. ಈಗ ಮಾನ್ಯ ಸ್ನೇಹಿತರು ಕೆಲವರು ಪೋಲೀಸ್ ಅಧಿಕಾರಿಗಳು ರಿಪೋರ್ಟು ಕೊಡುತ್ತಾರೆ ಅದರಂತೆ ಇವರು ಓದುತ್ತಾರೆ ಎಂದು ಹೇಳಿದರು. ಇದೀ ಪ್ರಪಂಚದಲ್ಲಿ ಈ ರೀತಿ ಮಾಡದೆ ಇನ್ನು ಯಾವ ರೀತಿಯಲ್ಲಿ ಮಾಡುತ್ತಾರೆ ಎನ್ನುವು

ದನ್ನು ತಿಳಿದು ನೋಡಬೇಕಾಗುತ್ತದೆ. ಶ್ರೀಮಾನ್ ವಾಟಾಳ್ ನಾಗರಾಜ್‌ರವರನ್ನು ಮುಖ್ಯ ಮಂತ್ರಿಗಳನ್ನಾಗಿ ಮಾಡಿದರೂ ಅವರೂ ಸಹ ಅಧಿಕಾರಿಗಳು ಇಲ್ಲದೆ ಕೆಲಸ ಮಾಡುವುದಕ್ಕಾಗುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಅವರಿಗೆ ಅಧಿಕಾರ ಕೊಟ್ಟು ನೋಡಿ, ಐದು ನಿಮಿಷ ಕೊಟ್ಟರೆ ಸಾಕು.

ಶ್ರೀ ಡಿ. ದೇವರಾಜ್ ಅರಸ್.—ಸಂವಿಧಾನದಪ್ರಕಾರ ಹಾಗೆ ನಾನು ಕೊಡುವುದಕ್ಕೆ ಸಾಧ್ಯವಿದ್ದರೆ ಖಂಡಿತವಾಗಿ ಕೊಟ್ಟು ನೋಡುತ್ತಿದ್ದೆ, ದುರಾದೃಷ್ಟವಶಾತ್ ಅದು ನನ್ನ ಕೈಯಲ್ಲಿಲ್ಲ. ಜನರು ಆ ಅಧಿಕಾರವನ್ನು ಯಾರಿಗೆ ಕೊಟ್ಟಿದ್ದಾರೆಂಬುದು ಪ್ರಪಂಚಕ್ಕೆ ಗೊತ್ತಿದೆ.

ಶ್ರೀ ವಾಟಾಳ್ ನಾಗರಾಜ್.—ತಾವು ರಾಜೀನಾಮೆ ಕೊಟ್ಟು ನನ್ನನ್ನು ಆ ಸ್ಥಾನಕ್ಕೆ ಚುನಾವಣೆ ಮಾಡಿಕೊಳ್ಳಿ.

ಶ್ರೀ ಡಿ. ದೇವರಾಜ್ ಅರಸ್.—ನೀವು ಎಲೆಕ್ಟ್ ಆಗುವ ಹಾಗಿದ್ದರೆ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ನೀವು ಬೆಂಬಲಕೊಟ್ಟರೆ ಸಾಧ್ಯವಿದೆ.

ಶ್ರೀ ದೇವರಾಜ್ ಅರಸ್.—ಅಡ್ಜರ್ನ್‌ಮೆಂಟ್ ಮೋಷನ್ ಅಲೋ ಮಾಡಬೇಕೋ ಬಿಡಬೇಕೋ ಎನ್ನುವುದು ತಮಗೆ ಸೇರಿದ್ದು ಎಂದು ಸ್ಪಷ್ಟಪಡಿಸುತ್ತೇನೆ. ಈ ಸಂಧರ್ಭದಲ್ಲಿ ವಿರೋಧಪಕ್ಷದ ನಾಯಕರಲ್ಲಿ ಏನಂತಿಮಾಡಿಕೊಳ್ಳುವುದೇನೆಂದರೆ ಅಡ್ಜರ್ನ್‌ಮೆಂಟ್ ಮೋಷನ್‌ನ್ನು ನಾವು ಮೂವ್ ಮಾಡುವ ಕಾಲದಲ್ಲಿ ಇಂತಹ ಪ್ರಶ್ನೆ ಅವ್ಯಾಹತವಾಗಿ ಬರುತ್ತದೆ. ನಾನು ಒಬ್ಬ ಸಾಧಾರಣ ಸದಸ್ಯನಾಗಿದ್ದಾಗಲೂ, ಮಂತ್ರಿಯಾಗಿದ್ದಾಗಲೂ, ಹಿಂದೆ ಶ್ರೀಮಾನ್ ಬಾಳಿಗಾ ಅವರು ಅಧ್ಯಕ್ಷರಾಗಿದಂಥ ಕಾಲದಿಂದ ಇಂತಹ ಅಡ್ಜರ್ನ್‌ಮೆಂಟು ಮೋಷನ್ ಬರುತ್ತಾ ಇದೆ. ರೂಲ್ಸ್ ಪ್ರಕಾರ ಈ ನಿಳುವಳಿ ಸೂಚನೆಗೆ ಅಧ್ಯಕ್ಷರ ಅನುಮತಿ ಬೇಕು. ಇನ್ನೊಂದು ವಿಷಯವನ್ನು ಈ ಸಭೆಯು ಗಮನಕ್ಕೆ ತರುತ್ತಿದ್ದೇನೆ. ಇದು ಪ್ರೊಸೀಡಿಂಗ್ಸ್‌ನಲ್ಲಿ ಇರತಕ್ಕಂಥ ಮಾತು. ನನ್ನ ಮಾತನ್ನು ಪುನಃ ವಿಮರ್ಶೆ ಮಾಡಿ ಸರಿಯಿಲ್ಲ ಎಂದರೂ ಅಡ್ಡಿ ಇಲ್ಲ, ತಪ್ಪನ್ನು ತಿದ್ದಿಕೊಳ್ಳುತ್ತೇನೆ. ಒಂದು ಕಾಲದಲ್ಲಿ ಅಡ್ಜರ್ನ್‌ಮೆಂಟ್ ಮೋಷನ್ ಸ್ಪೀಕರ್ ಹತ್ತಿರ ಬಂದಾಗ ಅವರು ತಮ್ಮ ಥೇಂಬರ್‌ನಲ್ಲಿ ಕುಳಿತು ಅಡ್ಮಿಟ್ ಮಾಡಬೇಕೇ ಅಥವಾ ಬೇಡವೇ ಎನ್ನುವ ತೀರ್ಮಾನವನ್ನು ತೆಗೆದುಕೊಂಡಿರುವ ನಿದರ್ಶನಗಳು ಒಂದಲ್ಲ ಹತ್ತಾರು ಇವೆ. ಈ ಒಂದು ವಿಚಾರದಲ್ಲಿ ನಾವು ಯಾರೂ ಅಧ್ಯಕ್ಷರು ಮಾಡಿದಂತಹ ತೀರ್ಮಾನವನ್ನು ತಪ್ಪು ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಹಿಂದೆ ಹಾಗೆ ನಡೆದಿದೆ. ಇಂತಹ ಸಂದರ್ಭಗಳು ಬಂದಾಗ ಕೆಲವರು ಮಾನ್ಯ ಸದಸ್ಯರುಗಳು ತಮ್ಮ ಅಡ್ಜರ್ನ್‌ಮೆಂಟ್ ಮೋಷನ್‌ನನ್ನು ಅಧ್ಯಕ್ಷರವರೇ ಅವರ ಥೇಂಬರಿನಲ್ಲಿ ಕುಳಿತು ಅಲೋ ಮಾಡಬೇಕೇ ಇಲ್ಲವೇ ಎನ್ನುವ ತೀರ್ಮಾನ ತೆಗೆದುಕೊಂಡರೆ ನಮಗೆ ಕಷ್ಟವಾಗುತ್ತದೆ, ಕೊನೆಯ ಪಕ್ಷ ಈ ಸಭೆಯ ಮುಂದೆ ಅದನ್ನು ತಂದು ಅಡ್ಜರ್ನ್‌ಮೆಂಟ್ ಮೋಷನ್ ಈ ರೀತಿ ಇದೆ ಎಂದು ತಿಳಿಸಿ ನಮಗೂ ಸ್ವಲ್ಪ ಅವಕಾಶ ಕೊಟ್ಟರೆ ಅದನ್ನು ತೆಗೆದುಕೊಳ್ಳುವುದಕ್ಕೆ ಏನು ಕಾರಣವಿದೆ ಎನ್ನುವುದನ್ನು ಹೇಳುತ್ತೇವೆ, ಎನ್ನುವ ವಿಚಾರ ಬಂತು. ತದನಂತರ ಆಗಿನ ಕಾಲದಲ್ಲಿ ಸ್ಪೀಕರ್ ಆಗಿದ್ದಂಥ ಶ್ರೀಮಾನ್ ಬಾಳಿಗಾ ಅವರು ಸಭೆಯ ಮುಂದೆ ಇಂತಹ ಅಡ್ಜರ್ನ್‌ಮೆಂಟ್ ಮೋಷನ್ ಬಂದಿದೆ ಈ ಕಾರಣಕ್ಕಾಗಿ ಅಲೋ ಮಾಡುತ್ತೇನೆ ಅಥವಾ ಇಲ್ಲ ಎಂದು ಹೇಳುವಂಥ ಸಂದರ್ಭಗಳು ಇದ್ದವು. ಅಂತಹ ಒಂದು ಸಂದರ್ಭದಲ್ಲಿ ವಿರೋಧ ಪಕ್ಷದ ಸದಸ್ಯರು ಮತ್ತು ನಾಯಕರು ಅವರಿಗೆ ಸ್ವಲ್ಪ ಅವಕಾಶ ಕೊಟ್ಟರೆ ಇಂತಹ ಕಾರಣಕ್ಕಾಗಿ ಈ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ ಎಂದು ಹೇಳಿದರು. ಮತ್ತೆ ಒಂದು ಡಿಸ್ಕ್ರಿಷನ್‌ನಲ್ಲಿ ಸರ್ಕಾರವನ್ನು ಕೇಳತಕ್ಕಂಥ ಸಂದರ್ಭಗಳಿವೆ. ನಾನು ಹೇಳಬೇಕು ಎಂದು ಸ್ಪಷ್ಟೀಕರಿಸಿ ಹೇಳುತ್ತಿಲ್ಲ. ತಾವು ಅಪ್ಪಣೆ ಕೊಟ್ಟಿದ್ದರಿಂದ ನಾನು ಹೇಳುತ್ತಿದ್ದೇವೆ. ನಾನ ಹೇಳುವುದರಿಂದ ಅಧ್ಯಕ್ಷರು ಇನ್‌ಫ್ಲ್ಯುಯನ್ಸ್ ಆಗಬಹುದು ಅಥವಾ ಅವರು ಹೇಳುವುದರಿಂದ ಇನ್‌ಫ್ಲ್ಯುಯನ್ಸ್ ಆಗಬಹುದು, ಅದೆಲ್ಲ ತಮಗೆ ಬಿಟ್ಟಿದ್ದು. ನನ್ನನ್ನು ತಾವು ಕೇಳುವುದರಿಂದ ಇದು ತಕ್ಕೀರಿಗೆ ಸಂಬಂಧಪಟ್ಟ ವಿಷಯವಾಗಿದೆ. ವಿರೋಧಪಕ್ಷದ ನಾಯಕರೂ ಕೂಡ ಇದು ತಕ್ಕೀರ್ ಆಗಿಲ್ಲ ಎಂದು ಹೇಳಿದ್ದಾರೆ. ಇದು ತಕ್ಕೀರ್ ಆಗಿದೆ, ಮತ್ತು ಅವರು ತಕ್ಕೀರಿಗೆ ಒಳಗಾಗಿದ್ದಾರೆ. ಈ ತಕ್ಕೀರನ್ನು ಹ್ಯಾಂಡಲ್ ಮಾಡಬೇಕಾದ ವಿಚಾರದಲ್ಲಿ ಅವರು ಕೆಲವರ ಅಭಿಪ್ರಾಯಗಳನ್ನು ಹೇಳಿರಬಹುದು. ಆದ್ದರಿಂದ ಇದು ಅಡ್ಜರ್ನ್‌ಮೆಂಟ್ ಮೋಷನ್ ಆಗತಕ್ಕ ವಿಷಯ ಅಲ್ಲ ಎಂದು ನನ್ನ ಸ್ಪಷ್ಟ ಅಭಿಪ್ರಾಯ.

Sri C. M. ARUMUGAM.—The Chief Minister is suggesting how the Chair should dispose of the adjournment motion.

Sri D. DEVARAJ URS.—I have every right to say what I want to.

Sri C. M. ARUMUGAM.—That right was not given to the Leader of the Opposition. I am not here to debate according to the likes and dislikes of the Chief Minister.

Sri D. DEVARAJ URS.—I am sorry the day is perhaps hot for the hon. Member.

Sri C. M. ARUMUGAM.—The day is very hot on account of the Chief Minister.

5-30 P.M.

ಶ್ರೀ ಎಚ್. ಡಿ. ದೇವೇಗೌಡ.—ನಮ್ಮ ಸಹಕಾರ ಬೇಡವೇ ಎಂದು ನಾನು ಅಧ್ಯಕ್ಷರಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತಾವು ಇದರ ಬಗ್ಗೆ ಅಂತಿಮ ತೀರ್ಮಾನ ಕೊಡುವುದಕ್ಕೆ ಮುಂಚೆ ನಾನು ಕೆಲವು ವಿಷಯಗಳನ್ನು ಹೇಳುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು.—ನಾನು ತೀರ್ಮಾನ ಕೊಡುವುದು ಬೇಡವೇ ?

ಶ್ರೀ ಹೆಚ್. ಡಿ. ದೇವೇಗೌಡ.—ತೀರ್ಮಾನ ಕೊಡಬೇಕಾಗಿಲ್ಲ ಎನ್ನುವ ಕನ್‌ಕ್ಲೂಷನ್ ತಾವು ತಿಳಿದುಕೊಂಡರೆ ಇಲ್ಲಿ ಕೆಲಸ ಮಾಡುವುದು ಕಷ್ಟ. ತಾವು ಎದ್ದು ನಿಂತಿರುವುದು ನೋಡಿದರೆ ಅಂತಿಮ ನಿರ್ಣಯ ಕೊಡುವುದಕ್ಕೆ ಎದ್ದು ನಿಂತಿದ್ದಾರೆ ಎನ್ನುವ ಭಾವನೆ ನನಗೆ ಬರುತ್ತದೆ.

ಅಧ್ಯಕ್ಷರು.—ಈಗ ನಾನು ಏನು ಮಾಡಬೇಕು ಎಂದು ಹೇಳುವುದಕ್ಕೆ ಎದ್ದು ನಿಂತಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಈಗ ಮುಖ್ಯ ಮಂತ್ರಿಗಳು ಏನು ಹೇಳಿದ್ದಾರೆ ಇದರ ಬಗ್ಗೆ ನಾನು ಒಂದರಡು ಕ್ಲಾರಿಫಿಕೇಷನ್ ಕೇಳಬೇಕಾಗಿದೆ.

ಅಧ್ಯಕ್ಷರು.—ಈಗ ತಾವು ಏನು ಹೇಳಿದಿರಿ ಅದನ್ನು ಗಮನವಿಟ್ಟು ಕೇಳಿದ್ದೇನೆ. ನಾನು ಎರಡೂ ಕಡೆಗಳಲ್ಲೂ ವಿಷಯ ಕೇಳಿದಮೇಲೆ ಈಗ ನನ್ನ ತೀರ್ಮಾನ ಕೊಡುವುದಕ್ಕೆ ಎದ್ದು ನಿಂತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ನಾನು ಅನೇಕ ವಿಷಯಗಳು ಹೇಳುವುದು ಇದೆ. ಅನಂತರ ತಾವು ತಮ್ಮ ತೀರ್ಮಾನವನ್ನು ಕೊಡಿ.

ಶ್ರೀ ಹೆಚ್. ಡಿ. ದೇವೇಗೌಡ.—ತಾವು ನಿರ್ಣಯವನ್ನು ಕೊಡುವುದಕ್ಕೆ ಮುಂಚೆ ನಮಗೆ ಕೆಲವು ವಿಷಯಗಳನ್ನು ಹೇಳುವುದಕ್ಕೆ ಅವಕಾಶ ಕೊಡಿ. ಆ ವಿಷಯದಲ್ಲಿ ತಮ್ಮ ಸಹಕಾರ ಬೇಕು. ಏತಕ್ಕೆಂದರೆ ತಾವು ತೀರ್ಮಾನ ಕೊಟ್ಟಮೇಲೆ ನಾವು ಅದನ್ನು ಪ್ರಶ್ನೆ ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ತಾವು ಎಲ್ಲ ವಿಷಯವನ್ನೂ ಹೇಳಿದ್ದೀರಿ. ಮತ್ತೇನೂ ಇಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಎಲ್ಲ ವಿಷಯವನ್ನೂ ಹೇಳಿಲ್ಲ. ನನಗೆ ಮಾತನಾಡಲು ಒಂದು ನಿಮಿಷ ಅವಕಾಶ ಕೊಡಿ. ಅನಂತರ ತಮ್ಮ ತೀರ್ಪನ್ನು ಕೊಡಿ.

Sri D. DEVARAJ URS.—I would submit that hon'ble Member including the leader of the opposition cannot go into the merits of the case or other aspects unless Adjournment Motion is allowed.

Sri H. D. DEVE GOWDA.—I know that unless it is admitted it cannot be discussed threadbare. ತಮ್ಮ ಹೇಳಿಕೆ ಮೇಲೆ ಒಂದೆರಡು ಕ್ಲಾರಿಫಿಕೇಷನ್ ಕೇಳಬೇಕು ಎಂದರೆ ಅದಕ್ಕೂ ಅವಕಾಶವಿಲ್ಲ ಎಂದು ಹೇಳಿದರೆ ನಾವು ಹೇಗೆ ಕೆಲಸ ಮಾಡುವುದಕ್ಕಾಗುತ್ತದೆ ?

Sri D. DEVARAJ URS.—Asking for clarification is different from making statement on the merits of the whole case.

ಶ್ರೀ ಹೆಚ್. ಡಿ. ದೇವೇಗೌಡ.—ತಮ್ಮ ಹೇಳಿಕೆಗಳ ಮೇಲೆ ನಾನು ಆರ್ಗ್ಯೂ ಮಾಡುತ್ತಾ ಇಲ್ಲ. ಈ ಕೇಸಿನ ಬಗ್ಗೆ ತಾವು ಕನ್‌ಸೆಂಟ್ ಕೊಡಬೇಕು. ಇದರ ಬಗ್ಗೆ ಸರ್ಕಾರ ಕೊಡಬೇಕಾದ ವಿವರಣೆ ಕೊಟ್ಟಿಲ್ಲ. ಅದಕ್ಕೋಸ್ಕರ ಸ್ವಲ್ಪಮಟ್ಟಿಗೆ ಮಾತನಾಡಲು ಅವಕಾಶ ಕೊಡಿ ಎಂದು ಕೇಳುತ್ತೇನೆ. ಅನಂತರ ತಮ್ಮ ತೀರ್ಪನ್ನು ಕೊಡಿ.

ಅಧ್ಯಕ್ಷರು.—ಅವರು ಹೇಳಿದ್ದರ ಮೇಲೆ ಕ್ಲಾರಿಫಿಕೇಷನ್ ಬೇಕಾದರೆ ಕೇಳಬಹುದು.

ಶ್ರೀ ಹೆಚ್. ಡಿ. ದೇವೇಗೌಡ.—ಮುಖ್ಯಮಂತ್ರಿಗಳು ಅಡ್ಜರ್ನ್‌ಮೆಂಟ್ ಮೋಷನ್ ಮೂವ್ ಮಾಡಬೇಕು ಎಂದು ಹೇಳಿದ್ದಾರೆ ಮತ್ತು ಈ ಸಭೆಯಲ್ಲಿ ಹೇಗೆ ಸಂಪ್ರದಾಯ ಬೆಳೆದುಕೊಂಡು ಬಂದಿದೆ ಎನ್ನುವ ವಿವರಣೆಯನ್ನು ಕೂಡ ಹೇಳಿದ್ದಾರೆ, ಅದು ನನಗೂ ಗೊತ್ತಿದೆ.

ಅಧ್ಯಕ್ಷರು.—ಇದರಲ್ಲಿ ತಪ್ಪು ಏನಿದೆ ಎಂದು ನನಗೆ ಕಾಣುತ್ತಾ ಇಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ತಾವು ಹಿಂದೆ ವಿಶ್ವ ಕರ್ಣಾಟಕ ಆಫೀಸಿನ ಮೇಲೆ, ಎಕ್ಸ್‌ಪೋ 70 ಮೇಲೆ ಏನು ಪ್ರತಿಭಟನೆ ಮಾಡಿದಿರಿ ಎನ್ನುವುದನ್ನು ಪ್ರೊಸೀಡಿಂಗ್ಸ್ ತೆಗೆದು ನೋಡಿದರೆ ಗೊತ್ತಾಗುತ್ತದೆ.

ಶ್ರೀ ಡಿ. ದೇವರಾಜ್ ಅರಸ್.—ತಾವು ಕೂಡ ಮಾಡಿ ಸ್ವಾಮಿ. ನಾನು ಏನು ಹೇಳಿದ್ದೇನೆ. ಅದನ್ನು ತೆಗೆದು ಓದಿ. ನನ್ನದು ತಪ್ಪಾಗಿದ್ದರೆ ನಾನು ಒಪ್ಪಿಕೊಳ್ಳುವುದಕ್ಕೆ ಸಿದ್ಧವಾಗಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಈಗ ಮಾನ್ಯ ಮುಖ್ಯ ಮಂತ್ರಿಗಳು ಮಾಡಿದ ಹೇಳಿಕೆಯಲ್ಲಿ ವಿಷಯಗಳನ್ನು ನಮಗೆ ವಿಶದೀಕರಿಸಬೇಕು. ಮೊದಲನೆಯದು ಪೋಲೀಸಿನವರು ಮಿತಿಮೀರಿದ ವ್ಯವಹಾರವನ್ನು ನಡೆಸಿದ್ದಾರೆ ವಿಚಾರಣೆ ಮಾಡಿಸುತ್ತೀರಾ ? ಅದನ್ನು ಯಾವ ರೀತಿ ವಿಚಾರಣೆ ಮಾಡಿಸುತ್ತೀರಿ? ಇನ್ನೊಂದು ಮಾತು ಅವರು ಹೇಳಿದ್ದಾರೆ; ಅಧಿಕಾರ ದುರುಪಯೋಗ ಮಾಡಿ ಜನರನ್ನು ದಂಗು ಬಡಿಯುವ ಹಾಗೆ ಮಾಡಿದ್ದಾರೆ ಎಂದು. ರಾ ಎಲ್ ಚೇಕ್ ಇಟ್ಸ್ ಓನ್ ಕೋರ್ಸ್ ಎಂದು ಹೇಳಿದಿರಿ. ಒಬ್ಬ ಪುರಸಭಾಧ್ಯಕ್ಷ ಅಧಿಕಾರ ದುರುಪಯೋಗ ಮಾಡಿ ಜನತೆಯನ್ನು ಇಷ್ಟುಮಟ್ಟಿಗೆ ದಂಗು ಬಡಿಯುವಂಥ ಕೆಲಸ ಮಾಡುತ್ತಾನೆಯೇ ಎಂದು ನಾನು ಕೇಳುತ್ತೇನೆ. ಆತ 196 ರಿಂದ 72 ರವರೆಗೂ ಪುರಸಭೆಯಲ್ಲಿ ಕೆಲಸ ಮಾಡಿದ್ದಾನೆ. ಅವನು ಸಂಸ್ಥಾ ಕಾಂಗ್ರೆಸ್‌ನವನಾದ್ದರಿಂದ ಅವನನ್ನು ಅಧಿಕಾರದಿಂದ ತೆಗೆಯುವ ಬಗ್ಗೆ ತಮ್ಮ ಪಕ್ಷಕ್ಕೆ ಶೇ ಭಾಗ ಮೆಜಾರಿಟಿ ಬರಲಿಲ್ಲ ಎಂದು ಈ ರೀತಿ ಹಿಂಸೆ ಕೊಡತಕ್ಕ ಬಗ್ಗೆ ಮತ್ತು ವಿರೋಧ ಪಕ್ಷವನ್ನು ದಮನ ಮಾಡುವ ಬಗ್ಗೆ ತಾವು ಕಾರ್ಯಕ್ರಮ ತೆಗೆದುಕೊಳ್ಳುವುದಾದರೆ ಈ ಸಭೆಯಲ್ಲಿ ನಾವು ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತದೆ. ಅಲ್ಲಿ ತಮ್ಮ ಪಕ್ಷಕ್ಕೆ ಶೇ ಭಾಗ ಮೆಜಾರಿಟಿ ಇಲ್ಲದೇ ಇರುವುದರಿಂದ, ಅಲ್ಲಿ ಏನಾದರೂ ಅಧಿಕಾರ ದುರುಪಯೋಗ ಮಾಡಿದ್ದರೆ ಆಗ ಆ ಮುನಿಸಿಪಾಲಿಟಿಯನ್ನು ಸೂಪರ್‌ಸೀಡ್ ಮಾಡಿಬಿಟ್ಟು ಅವನನ್ನು ತೆಗೆದುಹಾಕಬಹುದಾಗಿತ್ತು. ಈ ರೀತಿ ಎಲ್ಲಾ ಪವರ್ಸ್ ಕೂಡ ಸರ್ಕಾರಕ್ಕೆ ಇರುವುದರಿಂದ ಅವರು ಅದರ ಬಗ್ಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬಹುದು. ಆದರೂ ಕೂಡ ಈಪೊತ್ತು ಪೋಲೀಸಿನವರು ಎಲ್ಲಿ ಮಿತಿಮೀರಿದ ವ್ಯವಹಾರವನ್ನು ಮಾಡಿದ್ದಾರೆ. ಇದರ ಬಗ್ಗೆ ಅವರು ಸೆಕ್ಷನ್ 302 ಅಥವಾ 356ನ್ನು ರೆಫರ್ ಮಾಡಿ ಹೇಳಿದರು. ನಾನು ಏನೂ ಕಾನೂನು ಪಂಡಿತ ಅಲ್ಲ. ನಾನು ಈ ಸಭೆಯಲ್ಲಿ ಕಾನೂನು ಪಂಡಿತನಾಗಿ ಮಾತನಾಡುತ್ತಾ ಇಲ್ಲ. ನಾನು ಹೇಳುವುದು ಇಷ್ಟೆ. ತಾವು ಯಾವ ಸೆಕ್ಷನ್ ಮೇಲೆ ಕೇಸನ್ನು ರಿಜಿಸ್ಟರ್ ಮಾಡಿದ್ದೀರೋ ಅದರಲ್ಲಿ ಅಸತ್ಯ ಇದೆ. ನೀವು ಸೆಕ್ಷನ್ 356ರಲ್ಲಿ attempt to murder ಎಂತ ಕೇಸು ಹಾಕಿಬಿಟ್ಟು ಅವನನ್ನು ಸೆರೆ ಹಿಡಿದಿದ್ದೀರಾ ಒಂದು ವೇಳೆ ಕೆಡ್‌ನ್ಯಾಪ್ ಮಾಡಿದರೂ ಕೂಡ ಅದಕ್ಕೆ ಯಾರು ಯಾರು ಜವಾಬ್ದಾರರಾಗಿರುತ್ತಾರೋ ಅವರನ್ನೆಲ್ಲಾ ವಿಚಾರಣೆ ಮಾಡಬೇಕು. ಆದುದರಿಂದ ನಾನು ಹೇಳುವುದು ಇದರ ಬಗ್ಗೆ ನಿಷ್ಪಕ್ಷಪಾತವಾದ ವಿಚಾರಣೆ ಆಗಬೇಕು. ತಾವು ಯಾವ ರೀತಿ ವಿಚಾರಣೆ ಮಾಡುತ್ತೀರಿ ಎನ್ನುವುದನ್ನು ಹೇಳಲಿಲ್ಲ. ಮತ್ತು ಇದು ವಿಚಾರಣೆ ಆದಮೇಲೆ ಅದರ ವರದಿಯನ್ನು ಈ ಸಭೆಯಲ್ಲಿ ಒಪ್ಪಿಸುತ್ತೀರಾ? 10 ವರ್ಷದಿಂದಲೂ ಮುನಿಸಿಪಾಲಿಟಿ ಅಧ್ಯಕ್ಷರಾಗಿದ್ದವರು ಊರು ಬಿಟ್ಟು ಹೋಗುತ್ತಾರೆ ಎಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ಅಂಥಾ ಒಬ್ಬ ಮನುಷ್ಯನ ಮೇಲೆ ಒಂದು ಸುಳ್ಳು ಆಪಾದನೆ ಮಾಡಿ ಕೈಗೆಳೆಗೆ ಬೇಡಿ ಹಾಕಿ ರಾಜಕೀಯ ದ್ವೇಷವನ್ನು ತೀರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುವುದು ಒಳ್ಳೆಯದಲ್ಲ. ನಾನು ಮೊದಲೇ ಹೇಳಿದಂತೆ ಮುಖ್ಯಮಂತ್ರಿಗಳೇ

(ಶ್ರೀ ಎಚ್. ಡಿ. ದೇವೇಗೌಡ)

ಅಲ್ಲ ಹೇಳಿ ಮಾಡಿಸಿದ್ದಾರೆ ಎಂತ ಹೇಳುವುದಕ್ಕೆ ಹೋಗುವುದಿಲ್ಲ. ಇದು ಪೋಲೀಸಿನವರ ಮಿತಿ ಮೀರಿದ ವ್ಯವಹಾರದಿಂದ ಆಗಿದೆ ಎಂದು ಹೇಳುತ್ತೇನೆ. ಆದುದರಿಂದ ಇದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಪೋಲೀಸಿನವರು ತಮ್ಮ ಕಾನೂನು ಪರಿಪಾಲನೆ ಮಾಡತಕ್ಕ ಕಾಲದಲ್ಲಿ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಅದನ್ನು ನಿಷ್ಪಕ್ಷಪಾತದಿಂದ ಮಾಡಬೇಕು. ಆ ರೀತಿ ಮಾಡಿದರೆ ಅದನ್ನು ಬೆಂಬಲಿಸಬಹುದು. ಅವರು ತೆಗೆದುಕೊಂಡ ಕಾರ್ಯಕ್ರಮ ಸರಿಯಾಗಿದ್ದರೆ ಅದಕ್ಕೆ ಸರ್ಕಾರದ ಬೆಂಬಲವೂ ಕೂಡ ಇದ್ದೇ ಇದೆ. ಆ ಧಾಟಿಯಲ್ಲಿ ಅವರು ಮಾತನಾಡಿದ್ದಾರೆ. ಆ ರೀತಿ ಪೋಲೀಸಿನವರು ಸರಿಯಾದ ಕ್ರಮದಲ್ಲಿ ಅದನ್ನು ತೆಗೆದುಕೊಂಡಿದ್ದಾರೆಯೇ ಇಲ್ಲವೇ ಎನ್ನುವುದೇ ನನ್ನ ಮೊದಲನೇ ವಾದ. ಏತಕ್ಕೆಂದರೆ ಅವರು ಕೇಸನ್ನು ಕನ್‌ಕಾಕ್ಟ್ ಮಾಡಿ ತಮ್ಮ ಮನಸ್ಸಿಗೆ ಬಂದಂತೆ ಕೇಸ್ ಹಾಕಬಹುದು. ಆದುದರಿಂದ ಇದರ ಬಗ್ಗೆ ನಿಷ್ಪಕ್ಷಪಾತವಾದ ವಿಚಾರಣೆ ಮಾಡಿಸುತ್ತೀರಾ? ಮತ್ತು ಅದು ವಿಚಾರಣೆಯಾದಮೇಲೆ ಅವರ ವರದಿಯನ್ನು ಸಭೆಯ ಮುಂದೆ ಕೊಡುತ್ತೀರಾ? ಕೊಟ್ಟರೆ ನಮಗೆ ಸಮಾಧಾನವಾಗುತ್ತದೆ. ಇದರಲ್ಲಿ ಏನೂ ಅನ್ಯಾಯವಾಗಿಲ್ಲ, ಯಾವ ರೀತಿಯಾಗಿಯೂ ರಾಜಕೀಯ ಹಿನ್ನೆಲೆಯಿಂದ ಕೆಲಸ ಮಾಡಿಲ್ಲ ಎನ್ನುವ ನಿಷ್ಪಕ್ಷಪಾತವಾದ ವಿಚಾರಣೆ ಆಗಬೇಕು ಎಂದು ನಾನು ಕೇಳುತ್ತೇವೆ. ಆದುದರಿಂದ ನಾನು ಕೇಳುವುದೇನೆಂದರೆ, ಮಾನ್ಯ ಮುಖ್ಯ ಮಂತ್ರಿಯವರು ಪೋಲೀಸ್ ಅಧಿಕಾರಿಗಳನ್ನು ಕಳುಹಿಸಿ ವಿಚಾರಣೆ ನಡೆಸುವುದು ಬೇಡ. ಯಾರಾದರೂ ಉನ್ನತ ಅಧಿಕಾರಿಯವರನ್ನು ಜುಡಿಷಿಯಲ್ ಪ್ರೊಬ್ ಆಗಬೇಕೆಂದು ನಾನು ಹೇಳುವುದಿಲ್ಲ—ಪೋಲೀಸ್ ಇಲಾಖೆಗೆ ಸಂಬಂಧಪಡದೆ ಇರುವವರನ್ನು ಕಳುಹಿಸಿ, ವಿಚಾರಣೆ ಮಾಡಿ ಅವರ ವರದಿಯನ್ನು ಸಭೆಗೆ ಕೊಡುತ್ತೇವೆನ್ನುವ ಭರವಸೆಯನ್ನು ಮಾನ್ಯ ಮುಖ್ಯ ಮಂತ್ರಿಯವರು ಕೊಡುವುದಾದರೆ ಅದಕ್ಕೆ ನಾವು ಒಪ್ಪಿಕೊಳ್ಳುತ್ತೇವೆ. ಎನ್ನುವ ಮಾತನ್ನು ಹೇಳುತ್ತೇನೆ.

†ಶ್ರೀ ವಾಟಾಳ್ ನಾಗರಾಜ್.—ಶ್ರೀಮಾನ್ ಅಣ್ಣೇಗೌಡರು ಸುಮಾರು 10 ವರ್ಷದಿಂದ ಪುರಸಭೆಯ ಸದಸ್ಯರಾಗಿದ್ದಾರೆ. ಪೋಲೀಸಿನವರು ಇವರ ವಿಷಯದಲ್ಲಿ ಬಹಳ ಅನ್ಯಾಯ ಮಾಡಿದ್ದಾರೆ. ಯಾರೋ ರಾಜಕೀಯ ಉದ್ದೇಶಗಳಿಗಾಗಿ ಈ ರೀತಿ ಮಾಡಿಸಿದ್ದಾರೆಂದು ನನ್ನ ಅಭಿಪ್ರಾಯ. ಮುನಿಸಿಪಲ್ ಅಧ್ಯಕ್ಷರ ಬಗ್ಗೆ ಒಬ್ಬ ಗೌರವಯುತ ಮತ್ತು ಜವಾಬ್ದಾರಿಯುತರಾಗಿರುವವರ ವಿಚಾರದಲ್ಲಿ ಇದ್ದಕ್ಕಿದ್ದ ಹಾಗೆ ಈಚಿನ ಚುನಾವಣೆಗಳು ನಡೆದನಂತರ ಈ ಒಂದು ಕೆಟ್ಟ ಪರಿಸ್ಥಿತಿ ಉದ್ಭವವಾಗಿರಬೇಕಾದರೆ ಇದಕ್ಕೆ ಕಾರಣವೇನು ಎನ್ನುವುದರ ಬಗ್ಗೆ ಜ್ಯುಡಿಷಿಯಲ್ ಎನ್‌ಕ್ವೈರಿ ನಡೆಯಬೇಕೆಂದು ಕೇಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಯವರು ಈ ರೀತಿ ಮಾಡಿಸಿದ್ದಾರೆ ಎಂದು ನಾನು ಹೇಳುವುದಿಲ್ಲ. ಈ ಸಂದರ್ಭದಲ್ಲಿ ಒಂದು ಜ್ಯುಡಿಷಿಯರ್ ಎನ್‌ಕ್ವೈರಿ ಆಗಬೇಕೆಂದು ನಾನು ಹೇಳುತ್ತೇನೆ.

† ಶ್ರೀ ಡಿ. ದೇವರಾಜ ಅರಸ್.—ಕೇಸು ಹಾಕಿರುವುದೇ ಕನ್‌ಕಾಕ್ಟೆಡ್ ಎನ್ನುವ ಅನುಮಾನವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ವ್ಯಕ್ತಪಡಿಸಿದ್ದಾರೆ. ಅಂಥ ಅನುಮಾನಕ್ಕೆ ಕಾರಣ ನನಗೆ ಗೊತ್ತಾಗಲಲ್ಲ. ಈ ಸಂದರ್ಭದಲ್ಲಿ ಏನು ನಡೆದಿದೆ ಎನ್ನುವುದನ್ನು ಸರಿಯಾಗಿ ತಿಳಿದುಕೊಂಡು ನಮಗೆ ಹೇಳಿ ಎಂದು ಹೇಳುತ್ತ ಇದ್ದಾರೆ. ಅದರಲ್ಲಿ ಒಂದು ಮಾತನ್ನೂ ಹೇಳಿದ್ದಾರೆ, ಜ್ಯುಡಿಷಿಯರ್ ಎನ್‌ಕ್ವೈರಿ ಮಾಡಬೇಕೆಂದಿಲ್ಲ, ಪೋಲೀಸ್ ಇಲಾಖೆಗೆ ಸೇರದ ಒಬ್ಬ ನಿಷ್ಪಕ್ಷಪಾತ ಉನ್ನತಾಧಿಕಾರಿಯವರನ್ನು ಕಳುಹಿಸಿ ವಿಚಾರಣೆ ಮಾಡಿಸಿ ಎಂದು ಹೇಳಿದ್ದಾರೆ. ಮಾನ್ಯ ವಿರೋಧ ಪಕ್ಷದವರು ಏನು ಅನುಮಾನವನ್ನು ವ್ಯಕ್ತಪಡಿಸಿದ್ದಾರೆ ಅದನ್ನು ಪರಿಹರಿಸಬೇಕಾದ್ದು ನನ್ನ ಕರ್ತವ್ಯ. ಆದುದರಿಂದ ಇದಕ್ಕೆ ಸಂಬಂಧಪಡದೆ ಸ್ವಲ್ಪ ದೂರವಿರತಕ್ಕ ಅಧಿಕಾರಿಯನ್ನು ಯಾರನ್ನಾದರೂ ಕಳುಹಿಸಿ, ಅಲ್ಲಿ ಏನು ನಡೆದಿದೆ ಎನ್ನುವುದರ ಬಗ್ಗೆ ಒಂದು ವರದಿಯನ್ನು ತರಿಸಿಕೊಂಡು ಸಭೆಯ ಮುಂದೆ ಇಡುವುದಕ್ಕೆ ನನ್ನ ಅಭ್ಯಂತರವಿಲ್ಲ. ಅದನ್ನೆಲ್ಲ ಹೇಳುವಾಗ ಪ್ರತಿಯೊಂದು ವಿಚಾರವೂ ಬರಬೇಕಾಗುತ್ತದೆ. ಏಕೆಂದರೆ ಯಾರು ಈ ತಪ್ಪಿಗೆ ಒಳಪಟ್ಟಿದ್ದಾರೆನ್ನುವ ದೂರು ಬಂದಿದೆ ಅವರು ಯಾರೇ ಆಗಿರಲಿ ಅವರದು ಏನಿದೆ, ಮತ್ತೊಬ್ಬರದು ಏನಿದೆ ಅದನ್ನೆಲ್ಲ ನಿಮ್ಮ ಮುಂದೆ ಇಡಬೇಕಾಗುತ್ತದೆ. ಅದನ್ನು ಮಾತ್ರ ಹೇಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ ಮತ್ತು ಕೆಲವು ಸದಸ್ಯರು.—ಆಗಬಹುದು.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರೆಲ್ಲ ಒಳ್ಳೆಯ ಹುರುಪಿನಿಂದ ಆಗಬಹುದು ಎಂದು ಹೇಳುತ್ತಿದ್ದಾರೆ. ನಾಳೆಯ ದಿನ ಸಭೆಯಲ್ಲಿ ಇದರ ಬಗ್ಗೆ ಎಲ್ಲ ವಿಷಯಗಳನ್ನು ತಿಳಿಸು ವಾಗಲೂ ಇದೇ ರೀತಿಯ ಹುರುಪು ಇರಲಿ ಎಂದು ನಾನು ತಮ್ಮ ಮೂಲಕ ಮಾನ್ಯ ಸದಸ್ಯರಲ್ಲಿ ಪ್ರಾರ್ಥನೆ ಮಾಡುತ್ತೇನೆ.

MADAM SPEAKER.—I have heard both the sides. The hon. members will have an opportunity to raise this matter during the discussion on Demands for Grants. The Hon. Chief Minister has also stated what he had to say about the matter. Hence I cannot give my consent to the adjournment motion.

Sri C. M. ARUMUGAM. – Madam Speaker, I am not questioning your Ruling. To raise an Adjournment Motion, Rule 52 of the Rules of Procedure must be complied with. My friends Sriyuths H. D. Deve Gowda and S. Bangarappa have raised it with the relevant facts about the recent occurrence. Are you satisfied with that Madam ?

MADAM SPEAKER.—Yes, it is all right.

Sri C. M. ARUMUGAM.—If you are satisfied with Rule 52, then you have no other alternative except to give consent.

MADAM SPEAKER.—I have heard both the sides, and Sri H. D. Deve Gowda has agreed for the enquiry in the matter. So, there is no need for that Adjournment Motion. When the movers are satisfied, where is the question of your raising it again ?

Sri C. M. ARUMUGAM.—It is not a matter between the Leader of the House and the movers. I have got some other matters to submit.

MADAM SPEAKER.—The question does not arise as I have not given my consent.

Sri C. M. ARUMUGAM.—The Speaker is in the shoes of the Judge. So, whatever you say must be just. I am a very small poor creature to dash against the Himalayan mountain. The Hon'ble Chief Minister made a suggestion about the past practice with regard to adjournment motions, which only indicated that you must argue and give your Ruling that way only. I am very glad that the Hon'ble Chief Minister is laughing..... .....

Sri D. DEVARAJ URS.—Hon. member Sri Armugam, who was so very rational in his speeches somehow today appears to have caught some other atmosphere. I am very much surprised about it.

Sri C. M. ARUMUGAM.—Not at all. I have my own individuality. The Budget Session is there. I will dig out the whole stock and bring it before the House during the Police Demand.

MADAM SPEAKER.—It is your privilege.